ಶ್ರೀಹನುಮದ್ಭೀಮಮಧ್ವಾಂತರ್ಗತಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾತ್ಮಕಶ್ರೀಲಕ್ಷ್ಮೀಹಯಗ್ರೀವಾಯನಮಃ

(ಈ ಪ್ರತಿಯನ್ನು ಹಿಂದಿನ ದ್ವೈತದ ಅಪೂರ್ವತೆಯ ಜೊತೆಗೆ ಸೇರಿಸಿಕೊಳ್ಳುವುದು)

ಶ್ರೀಮದಾಚಾರ್ಯರ ಅನುಗ್ರಹರೂಪವಾದ ದ್ವೈತಮತದ ವೈಶಿಷ್ಟ್ಯವನ್ನು ತಿಳಿದಮೇಲೆ ಅದರ ಪ್ರವರ್ತಕರಾದ ಶ್ರೀಪ್ರಾಣದೇವರ ಬಗ್ಗೆ ತಿಳಿಯುವುದು ಅವಶ್ಯಕ ಮತ್ತು ತದನಂತರ ನಾವು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಅರಿವು ಮೂಡಿಸಿಕೊಳ್ಳಲು ಈ ಕೆಳಕಂಡ ಮೂರು ಬರವಣಿಗೆಗಳನ್ನು ಕರ್ನಾಟಕ ರಾಜ್ಯದ ದಾವಣಗೆರೆಯಲ್ಲಿರುವ 'ಶ್ರೀಸರ್ವಜ್ಞಾಚಾರ್ಯ ಸೇವಾ ಸಂಘ'ದ ರಜತ ಮಹೋತ್ಸವ ಸ್ಮಾರಕ ಗ್ರಂಥದಿಂದ ಆರಿಸಲಾಗಿದೆ. (ರಜತ ಮಹೋತ್ಸವ ನಡೆದಿದ್ದು 1959ನೇ ಇಸ್ವಿ,(ಶ್ರೀವಿಳಂಬಿ ಸಂವತ್ಸರದ ಮಾಘಶುದ್ಧ ಪಂಚಮೀ) ಬಹುಶಃ ಆ ಕಾಲದಲ್ಲಿ ಬರೆದ ಈ ಬರವಣಿಗೆಗಳು ಇಂದಿಗೂ ಅನ್ವಯಿಸುತ್ತವೆಂದರೆ ನಮ್ಮ ಶ್ರದ್ಧೆಯ ಪರಿಚಯವು ಆಗುವುದು.

1.ಮಾತರಿಶ್ವಮಹಿಮಾ ; 2.ಯುವಕರ ಕರ್ತವ್ಯ ; 3. ವೈಷ್ಣವರ ಮುಖ್ಯಕರ್ತವ್ಯ .

## 1.<u>ಶ್ರೀ ಮಾತರಿಶ್ವಮಹಿಮಾ ----</u>ಲೇಖಕರು ಶ್ರೀ ಮು.ಶ್ರೀ. ಗುಂಡೂರಾವ್ , ಬಿ.ಎ.(ಆನರ್ಸ್)

ಶ್ರೀಹರಿಯ ಪ್ರಧಾನ ಸಚಿವ, ಶ್ರೀವಾಯುದೇವ. ಈ ದೇವನ ಅಸಂಖ್ಯನಾಮಗಳಲ್ಲಿ ಪವಮಾನ, ಮಾತರಿಶ್ವ , ಮುಖ್ಯಪ್ರಾಣ ಮೊದಲಾದುವು ಅತ್ಯಂತ ಮಹಿಮಾಸ್ಪದವಾದವುಗಳು. ವಾಯುದೇವರ ಯಾವುದೊಂದು ನಾಮದ ಶಕ್ತಿಯನ್ನೂ ಮಹಿಮೆಯನ್ನೂ ಅರಿತವರೆಂದರೆ ಅವನ ಮಾತಾಪಿತೃಗಳಾದ ಶ್ರೀಲಕ್ಷ್ಮೀನಾರಾಯಣರು. ಈತನು ಜೀವೋತ್ತಮನಾದುದರಿಂದ, ಇತರ ಜೀವರು ಯಥಾಶಕ್ತಿ ತಿಳಿಯಬಲ್ಲರು. ಜೀವನ ಸ್ವರೂಪವೆಂತಹುದೆಂದು ಪುಟಕ್ಕೆ ಹಾಕಿ ಪರೀಕ್ಷಿಸಲು ಮೊದಲಿನ ಒರೆಗಲ್ಲು ಶ್ರೀವಿಷ್ಣುಭಕ್ತಿ . ವೈಷ್ಣವಾಗ್ರೇಸರನೆಂದರೆ ನಮ್ಮ ಮುಖ್ಯಪ್ರಾಣ. ವೇದೋಪನಿಷತ್ತುಗಳಲ್ಲಿ ವಾಯುದೇವನ ಮಹಿಮೆಯು ವಿಪುಲವಾಗಿ ಪ್ರತಿಪಾದಿಸಲ್ಪಟ್ಟಿದೆ. ಅದರ ಸವಿಯನ್ನು ಕಂಡ ಶ್ರೀರಾಘವೇಂದ್ರತೀರ್ಥರು ತಮ್ಮ ಪ್ರಾತಃಸಂಕಲ್ಪಗದ್ಯದಲ್ಲಿ-

'ಶ್ರೀವಿಷ್ಣುಭಕ್ತ್ಯಾದ್ಯನಂತಗುಣಪರಿಪೂರ್ಣರಮಾವ್ಯತಿರಿಕ್ತಪೂರ್ವಪ್ರಸಿದ್ಧವ್ಯತಿರಿಕ್ತಾನಂತವೇದಪ್ರತಿಪಾದ್ಯಮುಖ್ಯತಮಾನಂತಜೀವನಿಯಾಮಕಾನಂತ-ರೂಪ ಭಗವತ್ಕಾರ್ಯಸಾಧಕ ಪರಮದಯಾಳು ಕ್ಷಮಾಸಮುದ್ರಭಕ್ತವತ್ಸಲ ಭಕ್ತಾಪರಾಧಸಹಿಷ್ಣು ಶ್ರೀಮುಖ್ಯಪ್ರಾಣಾವತಾರಭೂತಾನಾಂ---'

ಎಂದು ಮೊದಲಾಗಿ ಮುಕ್ತಕಂಠದಿಂದ ಸ್ತೋತ್ರಮಾಡಿ ಶ್ರೀವಾಯುದೇವನ ಅನೇಕಾನೇಕಸುಗುಣಾತಿಶಯಗಳನ್ನು ತೋರಿಸಿಕೊಟ್ಟಿದ್ದಾರೆ. ಅಪರೋಕ್ಷಜ್ಞಾನಿಗಳ ಮೇಲಿನ ಮಾತಿನಲ್ಲಿ ರಸದೂಟವಿದೆ; ಜ್ಞಾನಭಂಡಾರ, ಹರಿಗುರುಭಕ್ತಿ ಎದ್ದುಕಾಣಬರುತ್ತಿದೆ. ಶ್ರೀವಿಷ್ಣುಭಕ್ತ್ಯಾದ್ಯನಂತಗುಣ-ಪರಿಪೂರ್ಣ, ಭಗವತ್ಕಾರ್ಯಸಾಧಕ, ಪರಮದಯಾಳು, ಕ್ಷಮಾಸಮುದ್ರ, ಭಕ್ತವತ್ಸಲ, ಭಕ್ತಾಪರಾಧಸಹಿಷ್ಣು ಶ್ರೀಮುಖ್ಯಪ್ರಾಣ ಪಾಹಿ ಮಾಂ ಪಾಹಿ ಮಾಂ, ಹೀಗೆ ನೂರಾರುಸಲ ಭಕ್ತಿಪುರಸ್ಸರವಾಗಿ ಹೇಳಿಕೊಂಡು, ಒಂದೊಂದು ಗುಣದ ಅರ್ಥಸಂಪತ್ತಿಯನ್ನೂ , ಪದಶಕ್ತಿಯನ್ನೂ ಸವಿಯುತ್ತಾ ಹೋದರೆ ಸಾಕು, ಆನಂದವಾಗುತ್ತದೆ.

ನಮ್ಮ ಮುಖ್ಯಪ್ರಾಣನು ಶ್ರೀಹರಿಯ ಪ್ರಧಾನಸಚಿವನು ಮಾತ್ರವಲ್ಲ ; ದೇವತೆಗಳಲ್ಲೆಲ್ಲಾ ಜ್ಯೇಷ್ಠನೂ, ಶ್ರೇಷ್ಠನೂ, ಪ್ರೇಷ್ಠನೂ ಹೌದು. ಇದಕ್ಕೆ ಅವನು ಶ್ರೀಹರಿಯ ಪರಮಪ್ರೇಮಾಸ್ಪದನಾಗಿರುವುದೇ ಕಾರಣ. ತತ್ತ್ವಾಭಿಮಾನಿದೇವತೆಗಳು ಪ್ರಜೆಗಳ ಧಾರಕರಾಗಿದ್ದರೂ, ನಮ್ಮ ಮುಖ್ಯಪ್ರಾಣನು ಮುಖ್ಯತಃ ಅವರಿಗೂ ಧಾರಕನೂ, ಪ್ರಕಾಶಕನೂ ಆಗಿರುತ್ತಾನೆ.

ಒಂದು ಕಾಲದಲ್ಲಿ ಈ ದೇವತೆಗಳಲ್ಲಿ 'ವಯಮೇತದ್ಬಾಣಮವಷ್ಟಭ್ಯವಿಧಾರಯಾಮ ಇತಿ'- ನಾವೇ ಜೀವನ ಶರೀರವನ್ನು ಆಶ್ರಯಿಸಿಕೊಂಡು ಧರಿಸುತ್ತೇವೆ, ಪ್ರಕಾಶಗೊಳಿಸುತ್ತೇವೆಂಬ ಅಭಿಮಾನ, ಮತ್ಸರಗಳು ಬೆಳೆದು ತಮ್ಮತಮ್ಮಲ್ಲಿ ಕಾದಾಡಿಕೊಂಡರು. ಆಗ,

'ತಾನ್ ವರಿಷ್ಠಃ ಪ್ರಾಣ ಉವಾಚ । ಮಾಮೋಹಮಾಪದ್ಯಥಾಹಮೇವೈ ತತ್ಪಂಚಧಾತ್ಮಾನಂ ವಿಭಜ್ಯೈತದ್ಬಾಣಮವಷ್ಟಭ್ಯ ವಿಧಾರಯಾಮೀತಿ'

ಜೀವರ ಶರೀರದಲ್ಲಿ ಪ್ರಾಣಾಪಾನಾದಿಪಂಚರೂಪಗಳಿಂದಲೂ, ನಾಗಾದಿರೂಪಗಳಿಂದಲೂ ಇದ್ದು, ನಾನೇ ಈ ಶರೀರವನ್ನು ಧರಿಸತಕ್ಕವನೂ, ಪ್ರಕಾಶಿಸತಕ್ಕವನೂ ಆಗಿರುತ್ತೇನೆ. ಆದುದರಿಂದ, ಎಲೈ ದೇವತೆಗಳಿರಾ! ವೃಥಾಮೋಹವನ್ನು ಹೊಂದಬೇಡಿರೆಂದು ಎಚ್ಚರಿಸಿದನು. (ಷಟ್ಪ್ರಶ್ನೋಪ-ನಿಷತ್) ಆದರೆ ಅಸುರಾವೇಶಯುಕ್ತರಾದ ದೇವತೆಗಳು ಮುಖ್ಯಪ್ರಾಣನ ಮಾತಿಗೆ ಕಿವಿಗೊಡಲಿಲ್ಲ ; ಅವನ ಮಾತಿನಲ್ಲಿ ವಿಶ್ವಾಸವನ್ನಿಡಲಿಲ್ಲ. ಕೂಡಲೇ ಮುಖ್ಯಪ್ರಾಣನು ಶರೀರದಿಂದ ಹೊರಗೆ ಹೋದನು. ತಕ್ಷಣವೇ ಆ ದೇವತೆಗಳಿಗೆ ಶರೀರದಲ್ಲಿ ನಿಲ್ಲಲೂ ಸಹ ಸಾಮರ್ಥ್ಯವಿಲ್ಲದೇ ಹೋಯಿತು. ಅವರೂ ಕೂಡ ಈಚೆಗೆ ಬಂದರು. ಆದರೂ, ಅವರ ಗರ್ವ ಇಳಿಯಲಿಲ್ಲ.ಶರೀರವನ್ನು ಒಬ್ಬೊಬ್ಬರಾಗಿ ಪ್ರವೇಶಿಸಿದರು, ಯಾರೊಬ್ಬರು ಪ್ರವೇಶ ಮಾಡಿದ್ದರಿಂದಾಗಲೀ, ಎಲ್ಲಾ ಒಟ್ಟಿಗೆ ಪ್ರವೇಶಮಾಡಿದ್ದರಿಂದಾಗಲೀ ಶರೀರ ಮೇಲಕ್ಕೆ ಏಳಲಿಲ್ಲ. ಮುಖ್ಯಪ್ರಾಣನು ಪ್ರವೇಶಮಾಡಿದ ಕೂಡಲೇ ಶರೀರವು ಎದ್ದು ನಿಂತುಕೊಂಡಿತು. ಹೀಗೆ ಮುಖ್ಯಪ್ರಾಣನೇ ಶ್ರೇಷ್ಠನೆಂದು ನಿರ್ಧಾರವಾಗಲು ಅಸುರಾವೇಶವಳಿದ ದೇವತೆಗಳು,

'ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಂ । ವಯಮದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವನಃ ॥'' ಎಂದು ಹೊಗಳಿದರು. ಎತ್ತಿನಗಾಡಿಯ ಚಕ್ರಗಳಅರಗಳಿಗೆ(ಹಲ್ಲುಗಳಿಗೆ) ಚಕ್ರದ ಕುಂಭವು(ಗುಮ್ಮೆಯು) ಹೇಗೆ ಮುಖ್ಯವೋ ಹಾಗೆ ಸಕಲರಿಗೂ ಮುಖ್ಯತಮ- ನಾದವನು ನಮ್ಮ ಮಾತರಿಶ್ವ ಅನ್ನ ಕೊಡುವ ದಾತಾರನವನು. ಸಲಹುವ ತಂದೆಯವನು. ಅವನಿಂದ ನಾವು; ಈ ಧಾರಕಶಕ್ತಿಯ ಮೂಲಾಶ್ರಯ ಶ್ರೀಹರಿ.

''ನ ಕೇವಲಂ ಪ್ರಾಣ ಏವ ಚೇತನಾನಾಂ ವಿಧಾರಕಃ । ಕಿಂತು ವಿಷ್ಣುಂ ಸಮಾಶ್ರಿತ್ಯ ಪ್ರಾಣೋ
ಜೀವಾನ್ ಬಿಭರ್ತ್ಯಯಂ । ಅತೋ ಮುಖ್ಯಾಶ್ರಯೋ ವಿಷ್ಣುಶ್ಚೇತನಾನಾಂ ಸ್ವತಂತ್ರತಃ ॥''

ಇದನ್ನು ಚೆನ್ನಾಗಿ ತಿಳಿದಿದ್ದಾನೆ ವಾಯುದೇವ. ತಾನು ಸಕಲಚೇತನರ ಧಾರಕನಾದರೂ, ಶ್ರೀಹರಿ ಮುಖ್ಯಧಾರಕ; ಶ್ರೀಹರಿಯ ಕಾರುಣ್ಯದಿಂದ ಶ್ರೀಹರಿಯನ್ನು ತಾನು ಆಶ್ರಯಿಸಿರುವುದರಿಂದ, ಈ ಮಹಿಮೆ ತನ್ನಲ್ಲಿದೆಯೆಂದು ಪೂರ್ಣವಾಗಿ ಅರಿತಿದ್ದಾನೆ.

ಇಂತಹ ಅಸಾಧಾರಣಶಕ್ತಿಸಂಪತ್ತಿಗೆ ಆವಾಸಸ್ಥಾನವಾದ ಮುಖ್ಯಪ್ರಾಣದೇವ ಜೀವಚೇತನಗಳನ್ನು ಮಾತ್ರವಲ್ಲದೇ ಜಡಜಗತ್ತನ್ನೂ ಹೊತ್ತಿರುತ್ತಾನೆ. ಶೇಷದೇವನು ಭೂಮಿಯನ್ನು ಹೊತ್ತಿರುತ್ತಾನೆಂದು ಪ್ರಸಿದ್ಧಿಯಾಗಿದ್ದರೂ, ಅವನ ಕ್ಷೇಮಾರ್ಥವಾಗಿ ಕೂರ್ಮರೂಪವನ್ನು ಧರಿಸಿ ಈ ಜಗತ್ತನ್ನು ನಿಜವಾಗಿಯೂ ಹೊತ್ತಿರುವವನು ವಾಯುದೇವ. ಇದನ್ನು ತಿಳಿದ ಶ್ರೀಪಾದರಾಜರು, '' ಆವ ಕಚ್ಛಪರೂಪದಿಂ ಲಂಡೋದಕದಿ ಓವಿ ಧರಿಸಿದ ಶೇಷಮೂರುತಿಯನು'' ಎಂದು ಹೇಳಿದ್ದಾರೆ. ಇದಕ್ಕೆ ಪ್ರಮಾಣ- 'ಸ ಏಷ ಕೂರ್ಮರೂಪೇಣ ವಾಯುರಂಡೋದಕೇ ಸ್ಥಿತಃ । ಉಪಾಸ್ತೇ

ಕೂರ್ಮರೂಪಂ ಯೋ ವಾಯುಸಂಸ್ಥಿಮಾಪ್ನುಯಾತ್ । ಇಚ್ಛಯಾ ವಿನಿವೃತ್ತಿಂ ವಾ ಲೋಕಂ ಚಾऽವೃತ್ತಿವರ್ಜಿತಂ ॥'' ಎಂಬುದು. ಈ ಯಥಾರ್ಥಜ್ಞಾನದ ಫಲ, ಸರ್ವದಾ ಸುಖವಾಗಿರುವುದು; ವೈಕುಂಠಲೋಕವಾಸ; ಬೇಕಾದಲ್ಲಿ ತನ್ನಿಚ್ಛೆಯಿಂದಲೇ ಸಂಚರಿಸುವುದು.

ಶ್ರೀಪಾದರಾಜರು ಮುಖ್ಯಪ್ರಾಣನಿಗೆ ''ಗುರುಕುಲತಿಲಕಮುಖ್ಯಪವಮಾನ'' ಎಂಬ ಬಿರುದನ್ನು ಕೊಟ್ಟಿರುತ್ತಾರೆ. ಇದರ ಔಚಿತ್ಯದ ಸೊಗಸು ಅನುಭವಿಸಿದರೆ ಮಾತ್ರ ಗೊತ್ತಾಗುವುದು. ಈ ಗುರುಕುಲತಿಲಕನ ಪಾದಧೂಳಿಯಿಂದಲೇ ಸಜ್ಜನರ ಉದ್ಧಾರವಾಗಬೇಕು. ವಾಯುದೇವನನ್ನು ಶ್ರೇಷ್ಠಶ್ರೇಷ್ಠ , ಪ್ರಿಯಾತ್ಪ್ರಿಯ ಮೊದಲಾದ ವಿಶೇಷಣಗಳಿಂದ ಅರ್ಥಾನುಸಂಧಾನ ಪೂರ್ವಕ, ಭಕ್ತಿಪುರಸ್ಸರವಾಗಿ ಉಪಾಸನೆ ಮಾಡಿ ಅಪರೋಕ್ಷಜ್ಞಾನಿಗಳಾದ ದಾಸಾರ್ಯರುಗಳು ಕೃತಕೃತ್ಯರಾಗಿದ್ದಾರೆ. ಅವರಿಗೆ ಪವಮಾನನ ಕಾರುಣ್ಯವೀಕ್ಷಣೆಯಾಗಿ ಪರಮಾನಂದವನ್ನು ಅನುಭವಿಸಿದ್ದಾರೆ. ಹಾಗೆಯೇ ನಾವೂ ಯಥಾಶಕ್ತಿ ಪವಮಾನಶಬ್ದದ ಶ್ರವಣ, ಮನನ, ನಿಧಿಧ್ಯಾಸನಗಳಿಂದ ಅನಿಷ್ಟ- ನಿವೃತ್ತಿಪೂರ್ವಕ ಇಷ್ಟಪ್ರಾಪ್ತಿಯನ್ನು ಹೊಂದಬಹುದು. ಪವಮಾನ ಎಂದರೆ ಸಂಸಾರಸಮುದ್ರದಿಂದ ದಾಟಿಸಿ ಮಹದಾನಂದರೂಪವಾದ ಮೋಕ್ಷಸಾಮ್ರಾಜ್ಯವನ್ನು ದೊರಕಿಸಿಕೊಡತಕ್ಕ ಮುಖ್ಯಪ್ರಾಣನೆಂದರ್ಥ. ಆದುದರಿಂದಲೇ ವೇದಗಳಲ್ಲಿ ಪರಮಪವಿತ್ರವಾದ ಈ ಪ್ರಾರ್ಥನೆ ಕಂಡುಬರುತ್ತದೆ. ''ಯತ್ರ ಜ್ಯೋತಿರಜಸ್ರಂ ಯಸ್ಮಿಂಲ್ಲೋಕೇ ಸ್ವರ್ಹಿತಂ । ತಸ್ಮಿನ್ಮಾಂ ಧೇಹಿ ಪವಮಾನಾಮೃತೇ ಲೋಕೇ ಅಕ್ಷಿತ ಇಂದ್ರಾಯೇಂದೋ ಪರಿಸ್ರವ ॥'' ----- ಹೇ, ಸಂಸಾರಮೋಚಕ, ಇಷ್ಟಪ್ರದ ಮುಖ್ಯಪ್ರಾಣ! ದಿವ್ಯತೇಜಃ ಪೂರ್ಣವಾದ,ಆನಂದರೂಪಿ! ಶ್ರೀವಿಷ್ಣುಸಾನ್ನಿಧ್ಯದಿಂದ ಕೂಡಿದ, ಮೋಕ್ಷರೂಪ, ಕ್ಷಯರಹಿತ ದಿವ್ಯಲೋಕದಲ್ಲಿ ನನ್ನ ಸೇರಿಸು; ಅಲ್ಲಿರುವ ಶ್ರೀಹರಿಯ ಪರಮಪ್ರಸಾದವನ್ನು ಪಡೆಯುವಂತೆ ಮಾಡು'. ಎಂತಹ ಉದಾತ್ತಧ್ಯೇಯದಿಂದ ಕೂಡಿದ ಪ್ರಾರ್ಥನೆ ಇದು.

ಮುಖ್ಯಪ್ರಾಣನ ಮಹಿಮೆಯನ್ನು ಅರಿತ ಶ್ರೀವ್ಯಾಸರಾಯಸ್ವಾಮಿಗಳು-

ಜಾಣನೀನಹುದೋ ಗುರುಮುಖ್ಯಪ್ರಾಣ ನೀನಹುದೋ ॥ಪ ॥
ರಾಣಿ ಭಾರತೀರಮಣ ನಿನಗೆಣೆ ।ಕಾಣೆ ತ್ರಿಭುವನದೊಳಗೆ
ಪ್ರಾಣಿಗಳ ಹೃದಯದಲಿ ಮುಖ್ಯ-। ಪ್ರಾಣನೆಂದೆನಿಸಿದೆಯೋ ಧಿಟ್ಟ
ಎಂದು ಹೇಳಿದ್ದಾರೆ. ಶ್ರೀಪುರಂದರದಾಸರು ಆನಂದಾತಿಶಯದಿಂದ,
ಮುಖ್ಯಪ್ರಾಣ ಎನ್ನ ಮೂಲಗುರುವೇ ॥ಪ॥
ರಕ್ಕಸಾಂತಕ ಶ್ರೀರಾಮನ ನಿಜದಾಸ ॥ಅ ॥
ತಂದೆ ನೀನೆ ಎನಗೆ ತಾಯಿ ನೀನೇ ಎನಗೆ । ಬಂಧು ನೀನೇ ಎನಗೆ ಬಳಗವು ನೀನೇ ।
ಎಂದೆಂದಿಗು ನಮ್ಮೆಲ್ಲರ ರಕ್ಷಿಪನು ನೀನೇ ॥ 1 ॥
ತಾತ ನೀನೇ ಎನಗೆ ಕರ್ತ ನೀನೇ ಎನಗೆ । ವಿತ್ತ ನೀನೇ ಎನಗೆ ವಿಭವ ನೀನೇ ।
ಸತ್ಯ ನೀನೇ ಎನಗೆ ಸದಾಚಾರವು ನೀನೇ ॥ 2 ॥
ಸುಖವು ನೀನೇ ಎನಗೆ ಸುಲಭವು ನೀನೇ ಎನಗೆ । ಏಕಾಂತ ಶ್ರೀ ಪುರಂದರವಿಠಲನ।
ಭಕುತ ನಿಜದಾಸ ನೀನೇ ॥ 3 ॥

ಎಂದು ಹೊಗಳಿದ್ದಾರೆ. ಶ್ರೀವಿಜಯದಾಸರಾದರೋ ''ಪಿಡಿ ಎನ್ನ ಕೈಯ ಮುಖ್ಯಪ್ರಾಣ ಭುವನಪ್ರಾಣ ಸದ್ಭವಪ್ರವೀಣಾ'' ಎಂದು ಹೇಳುತ್ತಾ ತಂದೆ ಈತನು ಕಾಣೋ, ತಾಯಿ ಈತನು ಕಾಣೋ। ಬಂಧುಬಳಗ ಸರ್ವಾರ್ಥವು ಈತನು, ಹಿಂದೆ ಮುಂದೆ ನಮಗಾಧಾರ ಈತನು । ಎಂದೆಂದಿಗೆ ಸಂಬಂಧಿಗನೀತನು । ಚಂದದರಸಾಯನಭೋಕ್ತನು ಈತನು। ಇಂದ್ರಿಯಂಗಳಿಗೆ ಪ್ರತಿದಿನ ನಿಯಾಮಕ । ನಂದಮೂರುತಿ ನಮ್ಮ ವಿಜಯವಿಠಲನಂಘ್ರಿ-ನಿಂದಿರಾರ್ಚಿಪಗಳ ಭಂಜನದೇವ ॥ ಎಂದು ಹೇಳಿ,

ಮೂರವತಾರದ ಗುರುವೇ ಸುರತರುವೆ। ವಾರವಾರಕ್ಕೆ ವಿಜಯಲನ್ನ ಪ್ರತಿಬಿಂಬ ॥

ಎಂದು ಜತೆ ಕೂಡಿಸಿದ್ದಾರೆ. ಮೇಲಿನ ಸುಳಾದಿಯಲ್ಲಿ ಹುದುಗಿರುವ ಶಾಸ್ತ್ರಾರ್ಥವನ್ನು ಶಕ್ತಿಯುಳ್ಳವರು ವಿಶದೀಕರಿಸುತ್ತಾ ಹೋದರೆ ಅದೇ ಒಂದು ಗ್ರಂಥವಾದೀತು. ಅಷ್ಟು ಪ್ರಮೇಯಾರ್ಥವನ್ನು ದ್ರಾಕ್ಷಾಪಾಕದಂತೆ ನಮಗೆ ದಯಪಾಲಿಸಿದ್ದಾರೆ ಮಹಾನುಭಾವರು. ಜಗನ್ನಾಥದಾಸರಾದರೋ

ಭಾರತೀರಮಣ ಸದ್ಭಕ್ತಬಂಧೋ ।
ಘೋರಭವಭಯಪರಾವಭಗೈಸು ಬೇಗ ॥ಪ॥
ಲೋಕಾಂತರಾತ್ಮಕನೆ ಈ ಕಮಲಜಾಂಡದೊಳು । ನಾಕಾಣೆ ನಿನ್ನುಳಿದು ಸಾಕುವವರ ॥
ನೀಕೈಯಪಿಡಿದು ಕೃಪಾವಲೋಕನದಿಂದ । ಜೋಕೆಮಾಡುವುದೆನ್ನ ವೈನಾಕಿವರಜನಕ ॥ 1 ॥
ಅನಿಲ ಎನ್ನವಗುಣಗಳೆಣಿಸಲು ತಡೆಯುಂಟೆ । ಕೊನೆಗೆ ನೀನೇ ಗತಿಯೋ ಅನಿಮಿಷೇಶ ।
ಜನನಿ ಜನಕ ಭ್ರಾತಜನಪ ಗುರುವರಮಿತ್ರ । ಎನಗೆ ನೀ ಸಕಲಸೌಖ್ಯದನೆಂದು ಪ್ರಾರ್ಥಿಸಿದೇ ॥ 2 ॥
ಹನುಮಭೀಮಾನಂದಮುನಿರಾಯ ನಿನ್ನ ಪ್ರಾ। ರ್ಥನೆಗೈಯುವರು ವಾಣಿಫಣಿಪಮೃಡರು ।
ಅನಿಮಿತ್ತಬಾಂಧವ ಶ್ರೀಜಗನ್ನಾಥವಿಠಲನ । ತನಯ ತಾವಕರ ಬಂಧನವ ಮೋಚನೆ ಮಾಡೋ ॥ 3 ॥

ಎಂದು ಅತಿದೈನ್ಯದಿಂದ ಬೇಡಿಕೊಂಡಿದ್ದಾರೆ. ತಮ್ಮ 'ಅಪಮೃತ್ಯು ಪರಿಹರಿಸೋ ಅನಿಲದೇವ'ನೆಂಬ ಪದ್ಯದಲ್ಲಂತೂ ವೇದೋಪನಿಷತ್ತು ಭಾರತ ಪುರಾಣಾದ್ಯಾಗಮಗಳ ಸಾರಸರ್ವಸ್ವವನ್ನು ಕೇಂದ್ರೀಕರಿಸಿ ವಾಯುದೇವನ ಮಹಿಮೆಯನ್ನು ಸ್ಫುಟಪಡಿಸಿದ್ದಾರೆ.

' ಅಪಮೃತ್ಯು ಪರಿಹರಿಸೋ ಅನಿಲದೇವ । ಕೃಪಣವತ್ಸಲನೇ ಕಾವರ ಕಾಣೆ ಜಗದೊಳಗೆ ॥ ಪ ॥

ಜ್ಞಾನಿಗಳು ಮರಣಕ್ಕೆ ಅಂಜುವುದಿಲ್ಲ. ಲೌಕಿಕವಾದ ಅಪಮೃತ್ಯುವಿಗೆ ಹೆದರುವುದಕ್ಕಿಂತ ಸಂಸಾರವೆಂಬ ಅಪಮೃತ್ಯುವನ್ನು ಕಂಡರೆ ಅವರಿಗೆ ಭಯ ಹೆಚ್ಚು. ದೇವತೆಗಳಿಗೆ ಅಸುರರಿಂದ ಅಪಮೃತ್ಯು ಬಂದಿತ್ತು. ಸ್ವರ್ಗವಾಸಕ್ಕೆ ಚ್ಯುತಿ ತಂದಿದ್ದರು. ಆಗ ವಾಯುದೇವನನ್ನು ಪ್ರಾರ್ಥಿಸಿಕೊಂಡು, ಆ

ಮೂಲಕ ಹರಿಪ್ರಸಾದ ಸಂಪಾದಿಸಿಕೊಂಡರು. ಕೃಪಣವತ್ಸಲನಾದ್ದರಿಂದ ತನ್ನವರನ್ನು ಅನಿಲದೇವ ಕಾಪಾಡಿದ. ಈ ಕೃಪಾಸಾಗರದಲ್ಲಿ ಯಾಕೆ ಮೊರೆಹೋಗಬೇಕೆಂದರೆ-

ನಿನಗಿನ್ನು ಸಮರಾದ ಅನಿಮಿತ್ತ ಬಾಂಧವರು ।ಎನಗಿಲ್ಲ ಆವಾವ ಜನುಮದಲ್ಲಿ
ಅನುದಿನವು ಎಮ್ಮನು ಉದಾಸೀನಮಾಡುವುದು । ಅನುಚಿತವು ಸಜ್ಜನಶಿಖಾಮಣಿಯೇ ॥'' ಎಂದು ಸಾರುತ್ತಾರೆ. ಈ ಸುಗುಣಾತಿಶಯ- ಗಳಿಂದ ಕೂಡಿದುದರಿಂದಲೇ ಮುಖ್ಯಪ್ರಾಣನನ್ನು ಶ್ರೀವಾದಿರಾಜರು ''ಈತನೇ ಲೋಕಗುರು ವೇದವಿಖ್ಯಾತ'' ಎಂದು ಕರೆಯುತ್ತಾರೆ. ನಮ್ಮ ''ಗುರುಪವಮಾನ ಪಾವನ್ನಚರಿತ''ನ ದಯದಿಂದ ನವವಿಧ ಭಕುತಿಜ್ಞಾನ ದೊರೆಯುತ್ತದೆ. ಆಗ 'ಅಮಲಾಭಕ್ತಿಶ್ಚ ತತ್ಸಾಧನಂ'' ಎಂಬ ಪೂಜ್ಯರ ನುಡಿಯಂತೆ ಶ್ರೀಹರಿಪ್ರಸಾದ ದೊರೆಯುತ್ತದೆ. ಮೋಕ್ಷವು ಕರಗತವಾಗುತ್ತದೆ.

ತ್ರಿವಿಧಜೀವರಲ್ಲಿ ನಿಂತು ವಾಯುದೇವನು, ಅವರವರ ಕರ್ಮಾನುಸಾರ, ಶ್ರೀಹರಿಯ ಆಜ್ಞಾನುಸಾರ ಪ್ರತಿನಿತ್ಯವೂ ಶ್ವಾಸಮಂತ್ರವನ್ನು ಜಪ ಮಾಡುತ್ತಿರುವನು.ಆಯಾ ಜೀವರಲ್ಲಿ ನಿಂತು ಹೀಗೆ ವ್ಯಾಪಾರಗಳನ್ನು ತತ್ವಾಭಿಮಾನಿ ದೇವತೆಗಳಿಂದ ಮಾಡಿಸಿದರೂ, ತಾನು ಮಾತ್ರ ನಿರ್ಲಿಪ್ತನಾಗಿರುವನು. ಸದಾ ಶ್ರೀಹರಿಧ್ಯಾನಮಗ್ನನಾಗಿರುವನು. ಈ ಕಾರ್ಯದಲ್ಲಿ ಶ್ರೀಭಾರತೀದೇವಿಯರು ಪೂರ್ಣವಾಗಿ ನೆರವಾಗುವರು. ಜೀವದ ಶರೀರವನ್ನೇ ಒಂದು 'ಪಿಂಡಾಂಡ'ವೆಂದು ಕರೆಯಬಹುದು. ಇಲ್ಲಿ ನಡೆಯುವ ಎಲ್ಲಾ ಕಾರ್ಯಗಳಿಗೂ ಲಕ್ಷ್ಮೀನಾರಾಯಣರ ತರುವಾಯ ವಾಯು-ಭಾರತೀದೇವಿಯರು ನಿಯಾಮಕರು. ಈ ಘನವ್ಯಾಪಾರವನ್ನು ತೃಣಜೀವ ಮೊದಲುಗೊಂಡು ಸರಸಿಜಾಸನನವರೆಗೆ ಮಾಡಿಸುವ ಗುರುಪವಮಾನನ ಮಹಿಮೆಯನ್ನು ಶ್ರೀಗುರುವಿಜಯವಿಠ್ಠಲರು ಒಂದು ಸುಳಾದಿಯಲ್ಲಿ ಸೊಗಸಾಗಿ ವಿವರಿಸಿದ್ದಾರೆ. ಅಕ್ಷರ, ಅಕ್ಷರದಲ್ಲಿಯೂ ಕಂಡು ಬರುವ ಶ್ರೀವಾಯುದೇವರ ಮಹಿಮೆಯು ಅಚಿಂತ್ಯಾದ್ಭುತವಾದುದು. ಮಹತ್ತಿನಲ್ಲಿ ಮಹತ್ತಾಗಿ, ಅಣುವಿನಲ್ಲಿ ಅಣುವಾಗಿ ವ್ಯಾಪ್ತನಾಗಿ, ಅಣುಬೃಹದ್ರೂಪಗಳಿಂದ ಮಾಡುವ ಕೃತ್ಯವು ರುದ್ರಾದಿಗಳಿಗೂ ತಿಳಿಯಲಸಾಧ್ಯ. ಹೀಗಿರುವಾಗ ಸಾಮಾನ್ಯಜೀವರ ಮಾತೇನು?

ಮಿನುಗುವ ಕಂಠದಲಿ ಎರಡುದಳದ ಕಮಲಾ । ಕರ್ಣಿಕೆ ಮಧ್ಯದಲಿ ಸತಿಸಹಿತದಲಿದ್ದು ।
ವನಜಾಸನವಿಡಿದು ತೃಣಜೀವರ ತನಕಾ । ತನುವಿನೊಳಗೆ ವಿಹಿತವಾದ ಶಬ್ದಗಳನ್ನು ।
ನೀನೇವೆ ಮಾಡಿ ಅವರವರಿಗೆ ಕೀರ್ತಿ। ಘನತೆಯನೆಯಿತ್ತು ಕಾಣಿಸಿಕೊಳ್ಳದೆಲೆ ।
ಮನುಜಾಧಮರಿಗೆ ಮಾಯವಮಸಗಿಸಿ । ಕೊನೆಗುಳಿದವರನ್ನು ನಿತ್ಯದುಃಖಗಳಿಂದಾ ।
ದಣಿಸುವಿ ಪ್ರಾಂತ್ಯದಲ್ಲಿ ಕಡೆಮೊದಲಿಲ್ಲದಲೇ । ದನುಜಮರ್ಜನ ಗುರುವಿಜಯವಿಠ್ಠಲರೇಯಾ ।
ನಿನಗಿತ್ತನು ಈ ಪರಿಯಾ ಸ್ವಾತಂತ್ರಮಹಿಮೆಯನೂ ॥

ಹೃತ್ಕಮಲಮಧ್ಯದಲ್ಲಿ ಹೊಳೆಯುವ ಕರ್ಣಿಕೆಯಲ್ಲಿ ಶೋಭಿಸುವ ಮೂಲೇಶನ ಪಾದಪಂಕಜಬಳಿ ನಿಂದು ಅತ್ಯಂತಭಕ್ತಿಯಿಂದ ಪೂಜಿಸುವ ವಾಯುದೇವರ ಚರಣಾಮೂಲದಲ್ಲಿ ಜೀವನು ಮುಖ್ಯಪ್ರಾಣನನ್ನು ಆಶ್ರಯಿಸಿದ್ದಾನೆ. ಶರಣಾಗತರನ್ನು ಉದ್ಧರಿಸಿ ಶ್ರೀಹರಿಪ್ರಸಾದ ದೊರಕಿಸಿ ಕೊಡುವುದು ಭಕುತರ ಅಭಿಮಾನಿಯಾದ ಘನಮಹಿಮ ಪವಮಾನನದು. ಅವಸ್ಥಾತ್ರಯದಲ್ಲಿಯೂ ನಮ್ಮನ್ನು ಕಾಪಾಡುವವನು ವಾಯುದೇವನೇ.

'' ಜಾಗ್ರತಿಸ್ವಪ್ನಸುಷುಪ್ತಿಯಲ್ಲಿ ನೀನೇ । ಜಾಗರೂಕನಾಗಿ ಜೀವರನ ಪಾಲಿಸಿ ।
ಭಾಗತ್ರಯದಲ್ಲಿ ವಿಭಾಗಮಾಡುವಿ । ನಾಗಭೂಷಣಾದಿ ಸುರರಿಗೆ ಜೀವನ ।
ಸಾಗರ ಮೊದಲಾದ ಸಕಲರಲ್ಲಿ ವ್ಯಾಪ್ತ। ನಾಗರಾಜನ ಅಂಗುಟದಿ ಮೀಟಿದ ಶಕ್ತ।
ಯೋಗಾನಾಮಾ ಗುರುವಿಜಯವಿಠ್ಠಲರೇಯನ । ಯೋಗವ ಪಾಲಿಸಿ ಭವದೂರಮಾಡೋದು ॥

ಶ್ರೀಹರಿಯ ವಿಹಾರಕ್ಕೆ ಆವಾಸಸ್ಥಾನ ನಮ್ಮ ವಾಯುದೇವ. ಅಂದರೆ ಶ್ರೀಹರಿಗೆ ಅವನು, ಐತರೇಯೋಪನಿಷತ್ತಿನಲ್ಲಿ ಪ್ರತಿಪಾದಿಸಿರುವಂತೆ, ಪ್ರತಿಮಾಸ್ಥಾನನಾಗಿರುತ್ತಾನೆ. ನಮ್ಮ ಶುಷ್ಕವಾಕ್ಯಗಳಿಂದ ಎಷ್ಟುಮಾತ್ರ ಶ್ರೀವಾಯುಮಹಿಮೆಯನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಆದುದರಿಂದಲೇ ಅಪರೋಕ್ಷಜ್ಞಾನಿಗಳ ಮಾತಿನಲ್ಲಿ ಗುರುಮುಖ್ಯಪ್ರಾಣನ ಮಹಿಮೆಯನ್ನು ಯಥಾಶಕ್ತಿ ಜೋಡಿಸಲಾಗಿದೆ.

ಇಂತಹ ಮಹಾಮಹಿಮನಾದ ನಮ್ಮ ಪವಮಾನನು, ಶ್ರೀಹರಿಯಾಜ್ಞಾನುಸಾರವಾಗಿ ಮೂರವತಾರಗಳನ್ನು ಮಾಡಿರುವನು. ಒಂದೊಂದು ಅವತಾರವೂ ಅತ್ಯದ್ಭುತ ವಿಚಿತ್ರಲೀಲೆಗಳಿಂದ ಕೂಡಿದುದು. ಶ್ರೀರಾಮಚಂದ್ರನ ಸೇವೆಗಾಗಿ ಹನುಮದವತಾರ; ಶ್ರೀಯಾದವಕೃಷ್ಣನ ಸೇವೆಗಾಗಿ ಶ್ರೀಭೀಮಸೇನಾವತಾರ; ಶ್ರೀವೇದವ್ಯಾಸರ ಸೇವೆಗಾಗಿ ಶ್ರೀಮಧ್ವಾವತಾರ. ಶ್ರೀಹನುಮದವತಾರ, ಶ್ರೀಭೀಮಸೇನಾವತಾರಗಳಲ್ಲಿ ಹೆಚ್ಚು ಬಲಕಾರ್ಯ. ಅದು ತ್ರೇತಾ, ದ್ವಾಪರಯುಗಗಳಲ್ಲಿ ನಡೆದುದು.ಶ್ರೀಮಧ್ವಾವತಾರವಾದರೂ ಈ ಕಲಿಯುಗದಲ್ಲಿ. ಇದು ಜ್ಞಾನಕಾರ್ಯಕ್ಕೆ ಮೀಸಲು. ಜ್ಞಾನಕಲುಷಿತವಾಗಿ, ಅಜ್ಞಾನ ತಾಂಡವವಾಡುತ್ತಾ, ತಾನೇ ದೇವರೆಂಬ ಅಹಂಭಾವ ಬೆಳೆದು ಬಂದಿದ್ದ ಕಾಲ; ಸಜ್ಜನರಿಗೆ ಉಳುವಿಲ್ಲದ ಕಾಲ. ಇಂತಹ ಕಾಲದಲ್ಲಿ ಧರ್ಮಸಂಸ್ಥಾಪನೆಗಾಗಿ, ಸಜ್ಜನರಕ್ಷಣೆಗಾಗಿ ಶ್ರೀವಾಯುದೇವರೇ ಶ್ರೀಹರಿಯಾಜ್ಞಾನುಸಾರವಾಗಿ ಅವತಾರ ಮಾಡಿದರು. ಶ್ರೀಹರಿಯೇ ಸರ್ವೋತ್ತಮನೆಂದು ಸಾರಿದರು; ಸಮೀಚೀನ ಜ್ಞಾನವನ್ನು ಸಜ್ಜನರಿಗಾಗಿ ಬೆಳಗಿದರು; ಅತ್ಯದ್ಭುತ ಲೀಲೆಗಳನ್ನು ತೋರಿದರು; ಅಂದು ಅವರು ಪ್ರಜ್ವಲಿಸಿದ ಜ್ಞಾನದೀವಿಗೆಯು, ಇಂದಿಗೂ ಸಂತತವಾಗಿ ಜ್ಞಾನಜ್ಯೋತಿಯನ್ನು ದಶದಿಕ್ಕುಗಳಲ್ಲಿ ಪ್ರಸರಿಸುತ್ತಿದೆ. ಅವತಾರಪುರುಷರೆನ್ನಿಸಿಕೊಂಡವರು ಅನೇಕವಾಗಿ ಆಗಿ ಹೋಗಿದ್ದಾರೆ; ಪವಾಡಗಳನ್ನೂ ತೋರಿದ್ದಾರೆ. ಶ್ರೀಮಧ್ವರು ತೋರಿಸಿದ ಅಮಾನುಷಲೀಲೆಗಳನ್ನು , ಅವಿವೇಕಿಗಳು ಈ ಪವಾಡಗಳ ಗುಂಪಿಗೆ ಸೇರಿಸಬಹುದು. ಆದರೆ ಶ್ರೀಮದಾನಂದತೀರ್ಥರು ಬಿಟ್ಟು ಹೋಗಿರುವ ಜ್ಞಾನಜ್ಯೋತಿಯನ್ನು ಎಷ್ಟುಮಾತ್ರವೂ ಎದುರಿಸಲಾರರು. ಶ್ರೀಮದಾಚಾರ್ಯರು 'ಇದಮಿತ್ಥಂ' ಎಂದು ಸ್ಥಾಪಿಸಿದ ಸಿದ್ಧಾಂತ ಅಮರವಾಗಿದೆ. ತಾವು ರಚಿಸಿದ 'ಸರ್ವಮೂಲ'ಗ್ರಂಥಗಳಲ್ಲಿ ತಮ್ಮ ವ್ಯಕ್ತಿತ್ವವನ್ನು ಅಚ್ಚಳಿಯದಂತೆ ಬಿಟ್ಟುಹೋಗಿದ್ದಾರೆ. ಶ್ರೀಮದಾಚಾರ್ಯರು ಇಂದೂ ಭಾವುಕರಿಗೆ, ಭಕ್ತರಿಗೆ ತಮ್ಮ ಗ್ರಂಥಗಳ ಮೂಲಕವೂ ದರ್ಶನವನ್ನು ಕೊಡುತ್ತಲಿದ್ದಾರೆ. ಶ್ರೀಮದಾಚಾರ್ಯರು ನಮ್ಮ ಆತ್ಮೋದ್ಧಾರಕ್ಕಾಗಿ ಮಾಡಿರುವ ಅನಂತ ಉಪಕಾರಗಳಲ್ಲಿ ಒಂದೆರಡನ್ನು ಸ್ಮರಿಸಿ, ಈ ಲೇಖನವನ್ನು ವಿರಮಿಸುವ.

ಶಿವಸರ್ವೋತ್ತಮನೆಂದು ಕೆಲವರೂ, ಶಕ್ತಿಸರ್ವೋತ್ತಮಳೆಂದು ಕೆಲವರೂ, ಗಣೇಶಸರ್ವೋತ್ತಮನೆಂದು ಕೆಲವರೂ, ಹೀಗೆ ಅನೇಕರು ತಮ್ಮ

ತಮ್ಮ ಸ್ವಕಪೋಲಕಲ್ಪಿತವಾದ ಮತಗಳನ್ನು ಸ್ಥಾಪಿಸಿ, ಜ್ಞಾನಭಾಂಡಾರವನ್ನೇ ಛಿದ್ರಛಿದ್ರಮಾಡಿದ್ದರು. ವೇದೋಪನಿಷತ್ತುಗಳಿಗೆ ಅಪಾರ್ಥವನ್ನು ಕಲ್ಪಿಸಿ ತಮ್ಮ ಬುದ್ಧಿಯ ತೀವ್ರತೆಯನ್ನು ಹೊರಗೆಡವಿದ್ದರು. ಮುಮುಕ್ಷುಗಳು ಆಂದೋಳನದಲ್ಲಿ ಸಿಲುಕಿ ಕ್ಲೇಶಪಡುತ್ತಿದ್ದರು. ಸ್ವಕಪೋಲಕಲ್ಪಿತಜ್ಞಾನ , ಆಯಾಜೀವರಸ್ವರೂಪಾನುಸಾರ, ಬುದ್ಧಿಗೆ ನಿಲುಕುವಷ್ಟು ಮಾತ್ರವಾದೀತೇ ಹೊರತು ಯಥಾರ್ಥಜ್ಞಾನವಾಗಲಾರದು. ಯಾವ ಒಬ್ಬ ವ್ಯಕ್ತಿಯ ಮತವನ್ನೂ ಜಿಜ್ಞಾಸುಗಳು ನಂಬಬೇಕಾಗಿಲ್ಲ, ಈ ದೃಷ್ಟಿಯಿಂದ ಶ್ರೀಮದಾಚಾರ್ಯರು ''ವೇದಮತವನ್ನು'' ಪುನರುತ್ಥಾನಗೊಳಿಸಿದರು. ವೇದಾರ್ಥವನ್ನು ಹೇಳುವಾಗ, ಯಥಾರ್ಥಜ್ಞಾನವನ್ನು ಬೀರುವಾಗ, ತಮ್ಮ ಸ್ವಂತಮಾತುಗಳನ್ನು ಹೆಣೆಯಲಿಲ್ಲ; ವೇದೋಪನಿಷತ್ತು ಇತಿಹಾಸ ಪುರಾಣಾದಿಗಳಿಂದಲೇ ಸಮಾಖ್ಯವಾಕ್ಯಗಳನ್ನೂ, ಪದಗಳನ್ನೂ, ಆಯಾ ವಾಕ್ಯ,ಪದಗಳ ಅರ್ಥವು ನಿಷ್ಪೃಷ್ಟವಾಗುವಂತೆ ಜಿಜ್ಞಾಸುಗಳಿಗೆ ತೋರಿಸಿದರು. ಶ್ರೀವೇದವ್ಯಾಸರಿಗೆ ಸಮ್ಮತವಾಗುವಂತೆ ಭಾಷ್ಯಾದಿಸಕಲಗ್ರಂಥಗಳನ್ನೂ ರಚಿಸಿದರು. ಇದು ಸರ್ವಮೂಲಗ್ರಂಥರಾಶಿಯ ವೈಶಿಷ್ಟ್ಯ.

ಶ್ರೀಮದಾಚಾರ್ಯರು ''ವಿಷ್ಣೋಃ ಸರ್ವೋತ್ತಮತ್ವಮೇವ ಮಹಾತಾತ್ಪರ್ಯಂ ಸರ್ವಾಗಮಾನಾಂ'' ಎಂಬ ಸಿದ್ಧಾಂತವನ್ನು ಆಸೇತು-ಹಿಮಾಚಲಪರ್ಯಂತ ಸಾರಿದರು. ಅದೇಕೆ, 'ವಿಷ್ಣು'ಎಂಬ ಸ್ಥಳದಲ್ಲಿ ನಾವು ಶಿವ, ಸ್ಕಂದ, ಶಕ್ತಿ, ಹೀಗೆ ಮತ್ತೊಂದು ಹೆಸರನ್ನು ಸೇರಿಸುತ್ತೇವೆ' ಎಂದು ಹೇಳಿದರೆ---- ''ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋರ್ಮಹಾತಾತ್ಪರ್ಯಂ ನೈವ ಚಾನ್ಯತ್ರ ಸತ್ಯಂ। ಅವಾಂತರಂ ತತ್ಪರತ್ವಂ ತದನ್ಯತ್ ಸರ್ವಾಗಮಾನಾಂ ಪುರುಷಾರ್ಥಸ್ತತೋಽತಃ॥ ಇತಿ ಪೈಂಗಿಶ್ರುತಿಃ॥

ಮುಖ್ಯಂ ಚ ಸರ್ವವೇದಾನಾಂ ತಾತ್ಪರ್ಯಂ ಶ್ರೀಪತೇಃ ಪರಂ।

ಉತ್ಕರ್ಷೇತು ತದನ್ಯತ್ರ ತಾತ್ಪರ್ಯಸ್ಯಾದವಾಂತರಂ''॥ ಇತಿ ಮಹಾವಾರಾಹೇ.

ಹೀಗೆ ಪ್ರಮಾಣಗಳನ್ನು ಕೊಡುತ್ತ ಹೋದರು. 'ವೇದಾರ್ಥವನ್ನು ನಿರ್ಣಯಿಸುವುವು ಶ್ರೀಕೃಷ್ಣದ್ವೈಪಾಯನಕೃತಬ್ರಹ್ಮಸೂತ್ರಗಳು ತಾನೇ. ಅವುಗಳಲ್ಲಿ ಮೊದಲನೇ ''ಓಂ॥ಓಂ ಅಥಾತೋ ಬ್ರಹ್ಮಜಿಜ್ಞಾಸಾ॥ಓಂ'' ಎಂಬ ಸೂತ್ರದಲ್ಲಿ 'ಬ್ರಹ್ಮ'ಪದವನ್ನು ಉಪಯೋಗಿಸಿದ್ದಾರೆ. ಅವನು ಚತುರ್ಮುಖಬ್ರಹ್ಮ ಏಕೆ ಆಗಬಾರದು; ಮತ್ತೊಬ್ಬನೇಕೆ ಆಗಬಾರದು ಎಂದು ಪೂರ್ವಪಕ್ಷಮಾಡಿದರೆ-- ''ಹಾಗಲ್ಲ , ಬ್ರಹ್ಮಪದದಿಂದ ಅಲ್ಲಿ ಪ್ರತಿಪಾದಿತವಾಗಿರುವ ವಸ್ತು , ''ವಿಷ್ಣುರೇವ''ಎಂದು ಸಯುಕ್ತಿಕವಾಗಿ ಸ್ಥಾಪಿಸಿದರು.

ಜಿಜ್ಞಾಸುವಿಗೆ ಈ ಜಗತ್ತಿನಲ್ಲಿ 'ಮೋಕ್ಷೋ ಹಿ ಸರ್ವಪುರುಷಾರ್ಥೋತ್ತಮಃ' ಎಂದು ಶ್ರೀಮದಾಚಾರ್ಯರು ಹೇಳಿದರು. ಅದಕ್ಕೆ ಪ್ರಮಾಣವಾಗಿ---- ''ಅನಿತ್ಯತ್ವಾತ್ಸದುಃಖತ್ವಾನ್ನಧರ್ಮಾದ್ಯಾಃ ಪರಂ ಸುಖಂ। ಮೋಕ್ಷಏವ ಪರಾನಂದಃ ಸಂಸಾರೇ ಪರಿವರ್ತತಾಂ॥'' ಇತಿ ಭಾರತೇ. ಎಂದರು . ಈ ಮೋಕ್ಷವು ಯಾರ ಪ್ರಸಾದದಿಂದ ದೊರಕುತ್ತದೆಂದರೆ--- ''ಮೋಕ್ಷಶ್ಚ ವಿಷ್ಣುಪ್ರಸಾದೇನ ವಿನಾ ನ ಲಭ್ಯತೇ। ಯಸ್ಯ ಪ್ರಸಾದಾತ್ಪರಮಾರ್ತಿರೂಪಾದಸ್ಮಾತ್ಸಂಸಾರಾನ್ಮುಚ್ಯತೇ ನಾಪರೇಣ । ನಾರಾಯಣೋಽಸೌ ಪರಮೋ ವಿಚಿಂತ್ಯೋ ಮುಮುಕ್ಷುಭಿಃ ಕರ್ಮಪಾಶಾದಮುಷ್ಮಾತ್ ॥''ಇತಿ ನಾರಾಯಣಶ್ರುತಿಃ ಎಂದು ಹೇಳಿದರು. ಅಷ್ಟೇ ಅಲ್ಲ ಶಿವಸರ್ವೋತ್ತಮತ್ವವನ್ನು ಪ್ರತಿಪಾದಿಸಲು ಹೊರಟಿರಬಹುದೆಂದು ಅಜ್ಞಾನಿಗಳು ತಿಳಿದುಕೊಂಡಿರುವ ಸ್ಕಾಂದಪುರಾಣದಿಂದಲೂ ''ಉತ್ಪತ್ತಿಸ್ಥಿತಿಸಂಹಾರಾ ನಿಯತಿರ್ಜ್ಞಾನಮಾವೃತಿಃ। ಬಂಧಮೋಕ್ಷೌ ಚ ಪುರುಷಾದ್ಯಸ್ಮಾತ್ಸ ಹರಿರೇಕರಾಟ್॥'' ಎಂಬ ಪ್ರಮಾಣವನ್ನು ಉದಾಹರಿಸಿದರು.

ವೇದಾದಿಗಳಿಗೆ ಆಪಾತತಃ ತೋರಿದ ಅರ್ಥವನ್ನು ಮಾಡಿ, ಜೀವಬ್ರಹ್ಮೈಕ್ಯವನ್ನು ಸ್ಥಾಪಿಸಲು ಹೊರಟವರ ಗತಿಯಂತೂ ಹೇಳತೀರದು. ಅವರುಗಳ ಮಹಾವಾಕ್ಯಗಳನ್ನೇ ತೆಗೆದುಕೊಂಡು, ಸಜ್ಜನರ ಉದ್ಧಾರಕ್ಕಾಗಿ, ಯಥಾರ್ಥಬೋಧಕವಾದ ಅರ್ಥಗಳನ್ನೇ ತೋರಿಸಿಕೊಟ್ಟರು. ಉದಾಹರಣೆಗಾಗಿ, ''ಅಹಂ ಬ್ರಹ್ಮಾಸ್ಮಿ'' ಎಂಬ ವಾಕ್ಯವನ್ನು ತೆಗೆದುಕೊಳ್ಳೋಣ . ಈ ವಾಕ್ಯಕ್ಕೆ ಮೇಲೆ ತೋರುವ ಅರ್ಥ- ಅಹಂ=ನಾನು, ಬ್ರಹ್ಮ=ಬ್ರಹ್ಮನಾಗಿ, ಅಸ್ಮಿ=ಇದ್ದೇನೆ. ಇನ್ನೇನು ಬೇಕು ಅಭೇದವಾದದ ದಿಗ್ವಿಜಯಕ್ಕೆ! ಅಂಧಂತಮೋದ್ವಾರಕ್ಕೆ !

'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯವು ಬೃಹದಾರಣ್ಯಕೋಪನಿಷತ್ತಿನ ಮೂರನೇ ಅಧ್ಯಾಯದ ಅವ್ಯಾಕೃತ ಬ್ರಾಹ್ಮಣದ ನಾಲ್ಕನೇ ಶ್ಲೋಕದಲ್ಲಿ ಬರುತ್ತದೆ. ಶ್ರೀಹರಿಯನ್ನು ಉಪಾಸನೆ ಮಾಡುವ ರೀತಿಯನ್ನು ತಿಳಿಸಿಕೊಡುತ್ತಾ, ಈ ಅಧ್ಯಾಯವು ಪ್ರಾರಂಭವಾಗುತ್ತದೆ. ಜೀವಸ್ವರೂಪವೇ ಸಚ್ಚಿದಾನಂದಾತ್ಮಕವಾದುದು. ಇದು (ಆನಂದವು)ಬ್ರಹ್ಮಾಪರೋಕ್ಷಾನಂತರ ಜೀವನಿಗೆ ಪೂರ್ಣವಾಗಿ ದೊರಕುವುದಾದರೆ ಆ ಬ್ರಹ್ಮನೂ(ವಿಷ್ಣುವೂ) ತನ್ನ ಸ್ವರೂಪವನ್ನು ತಿಳಿದೇ ಗುಣಪೂರ್ಣನಾಗಿದ್ದಾನೆಯೋ ಎಂಬ ಪ್ರಶ್ನೆ ಬರುತ್ತದೆ.ಆಗ ವೇದಪುರುಷನು, ಅನಾದಿನಿತ್ಯವಾದ ಅಪರೋಕ್ಷಜ್ಞಾನದಿಂದ ತನ್ನ ಸ್ವರೂಪವನ್ನು ಬ್ರಹ್ಮನು ಸರ್ವದಾ ತಿಳಿದುಕೊಂಡಿರುವುದರಿಂದಲೇ ಅವನು ಪರಿಪೂರ್ಣನಾಗಿದ್ದಾನೆಂದು ಹೇಳುತ್ತಾನೆ. ವೇದಪುರುಷನ ಮಾತುಗಳು ಅಪಾರ್ಥಕ್ಕೆ ದಾರಿಯನ್ನೇ ಕೊಡುವುದಿಲ್ಲ.

''ಬ್ರಹ್ಮ ವಾ ಇದಮಗ್ರ ಆಸೀತ್ತದಾತ್ಮಾನಮೇವಾವೇದಹಂ। ಬ್ರಹ್ಮಾಸ್ಮೀತಿ......ಏವಂ ವೇದಾಹಂ ಬ್ರಹ್ಮಾಸ್ಮೀತಿ।''

ಅರ್ಥ ಎಷ್ಟು ಸ್ಫುಟವಾಗಿದೆ. ಬ್ರಹ್ಮನು, ಆತ್ಮಾನಂ=ತನ್ನನ್ನು ತಾನೇ, ವೇದ=ತಿಳಿದುಕೊಂಡನು. ಏನೆಂದು? ಅಹಂ, ಬ್ರಹ್ಮ, ಅಸ್ಮಿ ಎಂದು. ಇಷ್ಟು ನಿಷ್ಪೃಷ್ಟವಾದ ಯಥಾರ್ಥವನ್ನು ಅಪಾರ್ಥಮಾಡಿದರೆ ಅಂಧಂತಮಸ್ಸಲ್ಲದೇ ಬೇರೊಂದು ಗತಿಯಿಲ್ಲವೆಂದು ವೇದಪುರುಷನೇ ಹೇಳುತ್ತಾನೆ. ಹಾಗಲ್ಲದೆ 'ಅಹಂ ಬ್ರಹ್ಮಾಸ್ಮಿ ಆತ್ಮಾನಮೇವಾವೇತ್' ಎಂದು ಬ್ರಹ್ಮನನ್ನು ಯಾರು ತಿಳಿಯುತ್ತಾರೋ ಅಂತಹ ಸಜ್ಜನರು ತಮ್ಮ ತಮ್ಮ ಯೋಗ್ಯತಾನುಸಾರವಾದ ಪೂರ್ಣತ್ವವನ್ನು ಪಡೆದು ಆನಂದಾತಿಶಯವನ್ನು ಹೊಂದುತ್ತಾರೆ. ಅಷ್ಟೇ ಅಲ್ಲದೇ, ಶ್ರೀಮದಾಚಾರ್ಯರು 'ಅಹಂಬ್ರಹ್ಮಾಸ್ಮಿ' ಎಂಬಲ್ಲಿ ಸರ್ವಶಬ್ದವಾಚ್ಯ ಶ್ರೀಹರಿ ಎಂಬುದನ್ನು ತೋರಿಸಿಕೊಡುತ್ತಾ--

'ಅಹಂ ಅಹೇಯಂ, ಬ್ರಹ್ಮ ಪರಿಪೂರ್ಣಂ, ಅಸ್ಮಿ ಸರ್ವದಾಽಸ್ತೀತಿ ಮೇಯಮಿತ್ಯೇತೈರ್ವಿಶೇಷಣೈರಾತ್ಮಾನಂ ಸ್ವರೂಪಮೇವಾವೇತ್॥''

ಎಂದು ಛಾಂದೋಗ್ಯಭಾಷ್ಯದಲ್ಲಿ ಹೇಳುತ್ತಾರೆ. ಯಾರಿಗೂ ಬಿಡಲು ಸಾಧ್ಯವಿಲ್ಲದವನಾದ್ದರಿಂದ ಶ್ರೀಹರಿ''ಅಹಂ'' ಶಬ್ದವಾಚ್ಯ; ಪರಿಪೂರ್ಣನಾದ್ದರಿಂದ ''ಬ್ರಹ್ಮ'' ಶಬ್ದವಾಚ್ಯ; ಯಾವಾಗಲೂ ಇರತಕ್ಕವನಾದ್ದರಿಂದ 'ಅಸ್ಮಿ'ಶಬ್ದವಾಚ್ಯ. ರಮಾವ್ಯತಿರಿಕ್ತವೇದಾಭಿಮಾನಿಯಾದ ವಾಯುದೇವನಿಗಲ್ಲವೇ ಈ ಅರ್ಥಸ್ಫುರಣೆ! ಈ ರೀತಿಯ ಅರ್ಥಾನುಸಂಧಾನ ಹೃದಯಗ್ರಂಥಿಯನ್ನು ಭೇದಿಸಿಬಿಡುತ್ತದೆ. ಈ ಉಪನಿಷತ್ತಿನ ಅವ್ಯಾಕೃತ ಬ್ರಾಹ್ಮಣಕ್ಕೆ ಶ್ರೀಮದಾಚಾರ್ಯರು ರಚಿಸಿರುವ ಭಾಷ್ಯವು ದಿವ್ಯದೈವಿಕಸೋಪಾನವನ್ನು ಮುಟ್ಟಿದೆ; ಸೊಗಸು, ಬಹು ಸೊಗಸು. ಶ್ರೀಹರಿಪ್ರೀತಿ, ಕೇವಲ ಪಾರಾಯಣದಿಂದಲೇ ದೊರಕುವುದರಲ್ಲಿ ಸಂದೇಹವಿಲ್ಲ.

ಛಾಂದೋಗ್ಯೋಪನಿಷತ್ತಿನಲ್ಲಿ ಮುಖ್ಯಪ್ರಾಣನ ಮಹಿಮೆಯು ಈ ರೀತಿ ಪ್ರತಿಪಾದಿತವಾಗಿದೆ. ಭಕ್ತಜನರಿಂದ ಉಪಾಸ್ಯನಾದವನು ಶ್ರೀಹರಿ. ಅವನ ಉಪಾಸನೆಗೆ ಒಂದು ಉತ್ತಮೋತ್ತಮ ಅಧಿಷ್ಠಾನ ಬೇಕು. ಈ ಅಧಿಷ್ಠಾನವೇ ಮುಖ್ಯಪ್ರಾಣನು. ಪೂರ್ವದಲ್ಲಿ ದೇವಾಸುರರಿಗೆ ವಿರೋಧವು ಬೆಳೆದು, ಯುದ್ಧ ಸಂಭವಿಸಿತು. ದೇವತೆಗಳು ಉದ್ಗೀಥನಾಮಕ ಶ್ರೀಹರಿಯ ಉಪಾಸನೆಯಿಂದ ಅಸುರರನ್ನು ಗೆಲ್ಲಬೇಕೆಂದು ನಿರ್ಧರಿಸಿದರು. ಚಂದ್ರಸೂರ್ಯಾದಿ ಅನೇಕ ದೇವತೆಗಳ ಅಧಿಷ್ಠಾನದಲ್ಲಿ ಶ್ರೀಹರಿಯನ್ನು ಪೂಜಿಸಿದರು. ಅಸುರರು ಇದನ್ನರಿತು ಆಯಾ ದೇವತೆಗಳನ್ನು ತಮ್ಮ ಸಾಮರ್ಥ್ಯದಿಂದ ಶಕ್ತಿಹೀನರನ್ನಾಗಿ ಮಾಡಿದರು. ಕೊನೆಗೆ ದೇವತೆಗಳು ಮುಖ್ಯಪ್ರಾಣನನ್ನಾಶ್ರಯಿಸಿ, ಅವನನ್ನು ಅಧಿಷ್ಠಾನವನ್ನಾಗಿ ಮಾಡಿಕೊಂಡು ಶ್ರೀಹರಿಪ್ರೀತಿಗಾಗಿ ಯಜ್ಞವನ್ನು ಮಾಡಿದರು. ಅಸುರರ ಕಾರ್ಯ ಮುಖ್ಯಪ್ರಾಣನಲ್ಲಿ ಕಿಂಚಿತ್ತಾದರೂ ನಡೆಯಲಿಲ್ಲ. ಶ್ರೀಹರಿಯಪ್ರಸಾದದಿಂದ ದೇವತೆಗಳು ವಿಜಯಿಗಳಾದರು. ಮುಖ್ಯಪ್ರಾಣನ ಮೇಲೆ ಬಿದ್ದ ದೈತ್ಯರು, ಮಣ್ಣಿನ ಹೆಂಟೆಯನ್ನು ದೊಡ್ಡ ಬಂಡೆಯ ಮೇಲೆ ಬಲವಾಗಿ ಹೊಡೆದರೆ ಹೇಗೆ ಪುಡಿಪುಡಿಯಾಗುವುದೋ ಹಾಗೆ, ಶ್ರೀವಿಷ್ಣುಪ್ರಿಯನೂ, ಶ್ರೀಹರಿಪ್ರತಿಮಾಸ್ಥಾನೀಯನೂ ಆದ ಮುಖ್ಯಪ್ರಾಣನ ಎದುರಿನಲ್ಲಿ ಅವರು ನುಚ್ಚು ನೂರಾಗಿ ಹೋದರು; ನಿರ್ವೀರ್ಯರಾಗಿ ಬಳಲಿ ಬೆಂಡಾದರು. ಇದನ್ನೇ ಶ್ರೀಮದಾಚಾರ್ಯರು ಈ ವೇದಭಾಗಕ್ಕೆ ಭಾಷ್ಯವನ್ನು ಬರೆಯುತ್ತಾ-

''ಉದ್ಗೀತಾಖ್ಯಸ್ಯ ವಿಷ್ಣೋರ್ವಿಶಿಷ್ಟಪ್ರತಿಮಾ ವಾಯುರೇವ । ಅತಸ್ತಸ್ಯ ಸರ್ವೋತ್ತಮತ್ವಜ್ಞಾನಪೂರ್ವಕಂ ತಸ್ಮಿಂಸ್ತತೋಽಪ್ಯುತ್ತಮತ್ವೇನೋಪಾಸಿತ ಏವ ಭಗವಾನ್ ಸಮ್ಯಕ್ ಫಲಂ ದದಾತೀತಿ ದರ್ಶಯತಿ ॥''

''ಏತಂ ವಿದಿತ್ವಾ ಸಂಸಾರಾನ್ಮುಕ್ತಿಮೇಷ್ಯತ್ಯಸಂಶಯಂ । ವಿಷ್ಣುಮಪ್ಯಂತತೋ ವೇತ್ತಿ ಪ್ರಾಣವೇತ್ತಾ ಯತಃ ಸ್ಫುಟಂ ॥''

ಉದ್ಗೀಥಶಬ್ದವಾಚ್ಯಶ್ರೀಹರಿಯ ಪ್ರತಿಮಾರೂಪನಾದ ಶ್ರೀವಾಯುದೇವನೇ ಸರ್ವೋತ್ತಮನೆಂಬ ಜ್ಞಾನದಿಂದ, ಶ್ರೀ ವಿಷ್ಣುಸರ್ವೋತ್ತಮ-ನೆಂದು ಉಪಾಸನೆ ಮಾಡಿದರೆ ಸಕಲಸಿದ್ಧಿಗಳನ್ನೂ ಪರಮಾತ್ಮನು ದಯಪಾಲಿಸುತ್ತಾನೆ. ಮುಖ್ಯಪ್ರಾಣನನ್ನು ಯಥಾರ್ಥವಾಗಿ ತಿಳಿದವನು ಸಂಸಾರವನ್ನೇ ದಾಟಿ ಮೋಕ್ಷಸಾಮ್ರಾಜ್ಯವನ್ನು ಸೇರುತ್ತಾನೆ ; ಅಂದರೆ ಮುಖ್ಯಪ್ರಾಣನನ್ನು ತಿಳಿದು ಅವನ ಅನುಗ್ರಹವನ್ನು ಸಂಪಾದಿಸಿ, ಶ್ರೀಹರಿಪ್ರಸಾದಕ್ಕೆ ಪಾತ್ರನಾಗುತ್ತಾನೆ. ಇದು ನಿಸ್ಸಂಶಯ. ಶ್ರೀಮದಾಚಾರ್ಯರ ಮಾತಿನ 'ಸ್ಫುಟಂ' ಎಂಬ ಶಬ್ದಪ್ರಯೋಗದ ಧ್ವನಿಶಕ್ತಿಯ ಸೊಗಸನ್ನು ಸಜ್ಜನರು ಸವಿಯಬಹುದು.

''ಮಾತರ್ಮೇ ಮಾತರಿಶ್ವನ್ಪಿತು-ರತುಲಗುರೋ ಭ್ರಾತರಿಷ್ಟಾಪ್ತಬಂಧೋ ।ಸ್ವಾಮಿನ್ ಸರ್ವಾಂತರಾತ್ಮನ್ನಜರಜರಯಿತಃ ಜನ್ಮಮೃತ್ಯಾಮಯಾನಾಮ್ ॥
ಗೋವಿಂದೇ ದೇಹಿ ಭಕ್ತಿಂ ಭವತಿ ಚ ಭಗವನ್ನೂರ್ಜಿತಾಂ ನಿರ್ನಿಮಿತ್ತಾಂ ।ನಿರ್ವ್ಯಾಜಾಂ ನಿಶ್ಚಲಾಂ ಸದ್ಗುಣಗಣಬೃಹತೀಂ ಶಾಶ್ವತೀಮಾಶು ದೇವ ॥
ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು . ಶ್ರೀಹರಿಪ್ರೀತಿರಸ್ತು.
ಶ್ರೀಮು.ಶ್ರೀ. ಗುಂಡೂರಾಯರಿಗೆ ನಮಸ್ಕಾರಗಳು.

## 2. ಯುವಕರ ಕರ್ತವ್ಯ --ಲೇಖಕರು. ಡಾ॥ಕೆ.ಎಂ. ಕೃಷ್ಣರಾವ್, ಎಂ.ಎ., ಪಿ.ಹೆಚ್.ಡಿ. ಬೆಂಗಳೂರು.

ದಾವಣಗೆರೆಯ ಶ್ರೀಸರ್ವಜ್ಞಾಚಾರ್ಯ ಸೇವಾ ಸಂಘದ ಬೆಳ್ಳಿಯಹಬ್ಬದ ಆನಂದೋತ್ಸವದಲ್ಲಿ ಸಂಘದ ಕಾರ್ಯಚಟುವಟಿಕೆಗಳನ್ನು- ಅದು ಈವರೆವಿಗೂ ಸಾಧಿಸಿರುವ ಕೆಲಸವನ್ನೂ ಗಮನಿಸಿ ಮುಂದೆ ಅದು ಇನ್ನೂ ಏನು ಮಾಡಬಹುದೆಂಬುದನ್ನು-ಗುರುತಿಸುವುದು ಅವಶ್ಯಕ ತಾನೆ. ಬಾಲಕರಲ್ಲಿ, ತರುಣರಲ್ಲಿ ಧರ್ಮಜಾಗೃತಿಯನ್ನು ತುಂಬುವ, ಅವರ ಸಂಸ್ಕೃತಿಯನ್ನು ಬೆಳೆಸುವ ಕಾರ್ಯವನ್ನು ಯಥೋಚಿತವಾಗಿ ಈ ಸಂಘವು ಶ್ರದ್ಧೆ-ಉತ್ಸಾಹಗಳಿಂದ ಮಾಡಿದೆ ಎಂಬುದನ್ನು ಸಂತೋಷದಿಂದ, ಹೆಮ್ಮೆಯಿಂದ ಸ್ಮರಿಸಬೇಕಾದುದು ನಮ್ಮ ಕರ್ತವ್ಯ. ಆತ್ಮೋದ್ಧಾರಮಾಡಿಕೊಳ್ಳುವ, ಮನಸ್ಸನ್ನು ಶ್ರೀಮಂತಗೊಳಿಸುವ, ಹೃದಯವಿಕಾಸಮಾಡುವಂತಹ ಕೆಲಸವೇ ಈ ಸಂಘದ ಪರಮಗುರಿ. ಸಂಘದಿಂದ ಇದುವರೆಗೆ ಪ್ರಕಟವಾಗಿರುವ ಪುಸ್ತಕಗಳನ್ನೂ , ಅದು ಕಾಲಕಾಲಕ್ಕೆ ಏರ್ಪಡಿಸುವ ಉತ್ಸವಗಳನ್ನೂ, ದಿನನಿತ್ಯದಲ್ಲಿ ಅಲ್ಲಿ ನಡೆಯುವ ಕಾರ್ಯಕ್ರಮವನ್ನೂ ಪರಿಶೀಲಿಸಿದರೆ ಇದು ಸುವೇದ್ಯ. ದಾವಣಗೆರೆಯಂತಹ ಒಂದು ಊರಿನಲ್ಲಿ ಇಂತಹ ಸಂಘ ಹುಟ್ಟಿಬೆಳೆದು ಈ ಬಗೆಯ ಅಪೂರ್ವಕಾರ್ಯವನ್ನು ನಡೆಸಿಕೊಂಡು ಬಂದು ಕಾಲುಶತಮಾನಕ್ಕೂ ಮಿಕ್ಕಿದ ನಿಡುಗಾಲಬದುಕಿ ಬೆಳ್ಳಿಯ ಹಬ್ಬ ಆಚರಿಸುತ್ತಿರುವುದು ಅಪೂರ್ವವಿಚಾರವೇ ಸರಿ. ಯಾವ ಸಂಘದಲ್ಲೇ ಆದರೂ ಸದಸ್ಯ ಸಂಖ್ಯೆ ಎಷ್ಟೇ ಇರಲಿ-ಅಲ್ಲಿಯ ಉಪಯುಕ್ತ ಕಾರ್ಯಚಟುವಟಿಕೆಗಳು ಅಲ್ಪಸಂಖ್ಯೆಯ ಕೆಲವು ಉತ್ಸಾಹೀವ್ಯಕ್ತಿಗಳನ್ನು ಅವಲಂಬಿಸಿರುತ್ತದೆ! ಇದು ಎಲ್ಲಿಯೂ ವಾಸ್ತವವಾದ ವಿಷಯ. ಈ ಸಂಘದಲ್ಲೂ ಇದು ಸತ್ಯ! ಸದಸ್ಯ ಸಂಖ್ಯೆ ಮಿತ. ಎಲ್ಲರೂ ಆಜೀವಸದಸ್ಯರೇ ! ಕಾರ್ಯನಿರತ ಸದಸ್ಯರ ಸಂಖ್ಯೆಯಂತೂ ಅತಿಪರಿಮಿತ ! ಕೆಲವರು ಎನ್ನುವ ಬದಲು ಒಬ್ಬಿಬ್ಬರು ಎಂದರೇ ಹೆಚ್ಚು ಉಚಿತ! ಈ ವಾಸ್ತವಾಂಶವನ್ನು ನೆನೆದಾಗಲೂ ಯುವಕರ ಕರ್ತವ್ಯಪ್ರಜ್ಞೆಯ ಕಡೆ ನಮ್ಮ ಗಮನಹರಿಯಬೇಕಾಗುತ್ತದೆ.

ಜೀವನದ ಅವಶ್ಯಕತೆಗಳನ್ನು ಪೂರೈಸುವ ಕೈಗಾರಿಕೆ, ಅಣೆಕಟ್ಟುಗಳು, ಯಾಂತ್ರಿಕಸೃಷ್ಟಿಗಳನ್ನು ಬೆಳೆಸುವ ವಿಜ್ಞಾನದ ಸಹಾಯದಿಂದ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳುವ, ಸಂಪತ್ತನ್ನು ಹೆಚ್ಚಿಸಿಕೊಳ್ಳುವ, ದಾರಿದ್ರ್ಯವನ್ನು ನೀಗುವ, ಎಲ್ಲ ಕೆಲಸಗಳನ್ನೂ ನಾವು ಮಾಡಬೇಕು-ಎಂಬುದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ಎಲ್ಲ ಶಕ್ತಿಸಾಮರ್ಥ್ಯಗಳೂ ಇವುಗಳಲ್ಲೇ ಕೇಂದ್ರೀಕೃತವಾಗಿ ಮನಸ್ಸು ಸದಾ ಈ ಲೌಕಿಕಸುಖಸಾಮಗ್ರಿ ಸಂಪಾದನೆಯ ಪ್ರಯತ್ನದಲ್ಲೇ ಮಗ್ನವಾದರೆ, ನಾವು ಬದುಕಿನಲ್ಲಿ ಆಶಿಸುವ ನಿಜವಾದ ಸುಖ ನಮಗೆ ಬರಲಾರದು ಎಂಬುದನ್ನು ಆಲೋಚಿಸಬೇಕು. ಲೌಕಿಕಅಗತ್ಯಗಳನ್ನು ಪೂರೈಸಿಕೊಳ್ಳುವ ಸಂಭ್ರಮದಲ್ಲಿ ಅಲೌಕಿಕಾನಂದವನ್ನು ಕೊಡುವ ವಿದ್ಯೆಯಕಡೆ ನಮ್ಮ ಮನಸ್ಸು ಹರಿಯುವುದು ಕೇವಲ ಅಗತ್ಯ. ಮೊದಲಿನದಕ್ಕಿಂತಲೂ ಹೆಚ್ಚು ಅಗತ್ಯ ಎಂದು ಒಪ್ಪಲು ಇಷ್ಟವಿಲ್ಲದಿದ್ದರೆ ಹೋಗಲಿ, ಕೊನೆಗೆ ಅಷ್ಟೇ ಅಗತ್ಯ ಎಂಬುದನ್ನಾದರೂ ಒಪ್ಪಲೇಬೇಕು! ಲೌಕಿಕ ಸುಖಸಾಧನೆಗಳು ಎಷ್ಟೇ ಸಂಪೂರ್ಣವಾಗಿ ಸಿದ್ಧಿಸಿದರೂ, ಆ ರಾಷ್ಟ್ರದ ಉಳಿವು ಬೆಳವಣಿಗೆ ಭದ್ರತೆ ಐಕ್ಯತೆಗಳು, ಆ ರಾಷ್ಟ್ರದ ಜನತೆಯ ಅಂತಸ್ತತ್ವವನ್ನು ಅವಲಂಬಿಸುತ್ತದೆ. ಜನತೆ ನಿಸ್ವಾರ್ಥಕ್ಕೆ, ತ್ಯಾಗಮಯಜೀವನಕ್ಕೆ ಕೊಂಚಮಟ್ಟಿಗಾದರೂ ಸಿದ್ಧವಾಗಬೇಕಾಗುತ್ತದೆ. ಪ್ರಜಾವರ್ಗದಲ್ಲಿ ಔದಾರ್ಯಬುದ್ಧಿ , ಪರಸ್ಪರಸಹನೆ, ಕೊಟ್ಟುಕೊಳ್ಳುವ ಮನೋಭಾವ, ಬೇರೊಬ್ಬರನ್ನು ಬದುಕಿಸಿ ತಾನೂ ಬದುಕುವ ಮನಸ್ಸು ರಾಷ್ಟ್ರದ ಏಳಿಗೆಗೆ ಕಾರಣವಾಗುತ್ತದೆ. ಇವುಗಳು ಬೆಳೆಯದೇ ಕೇವಲ ಸುಖಸಾಮಗ್ರಿಗಳು ಮಾತ್ರ ಬೆಳೆದರೆ ಅಂತಹ ರಾಷ್ಟ್ರಕ್ಕೆ ಅಪಾಯ ಸಿದ್ಧವಾದುದೇ. ಈ ಅಪಾಯದಿಂದ ಪಾರಾಗಲು ಈ ಗುಣಗಳನ್ನು ಬೆಳೆಸಿಕೊಳ್ಳಬೇಕಾದರೆ ಧಾರ್ಮಿಕವಿದ್ಯೆ ಅಗತ್ಯ. ನಮ್ಮ ರಾಷ್ಟ್ರದ ಯುವಜನರ ಗಮನ ಈ ಕರ್ತವ್ಯಪ್ರಜ್ಞೆಯಕಡೆ ಇಂದು ಹೆಚ್ಚಾಗಿ ಹರಿಯಬೇಕಾಗಿದೆ.

## 2. ಯುವಕರ ಕರ್ತವ್ಯ

ಧಾರ್ಮಿಕತಳಹದಿ ಸಡಿಲವಾದರೆ, ಅಂತಹ ಸಮಾಜದ ಮೇಲೆ ಬಂದೆರಗುವ ಅಪಾಯಗಳು ಅಪಾರ. ಒಂದು ಕಾಲದಲ್ಲಿ ಧಾರ್ಮಿಕ ಕಟ್ಟುಪಾಡುಗಳು ಸುಭದ್ರವಾಗಿದ್ದು, ಚೆನ್ನಾಗಿ ಪಾಲಿತವಾಗಿ, ಪಾರಲೌಕಿಕವಿದ್ಯೆಗೆ ಬೆಲೆಯಿತ್ತು ಹಸನಾಗಿ ಬದುಕಿ ಬೆಳಗಿದ ನಾಡು ನಮ್ಮದು. ಪ್ರಪಂಚದಲ್ಲೇ ಈ ದೃಷ್ಟಿಯಿಂದ ಅತ್ಯುತ್ತಮವಾದ ರಾಷ್ಟ್ರ ಭರತಖಂಡ. ಇಲ್ಲಿ ಧರ್ಮ,ತತ್ತ್ವ,ಶಾಸ್ತ್ರ, ಬೆಳೆದಷ್ಟು ಬೇರೆಲ್ಲೂ ಬೆಳೆಯಲಿಲ್ಲ. ಕರ್ಮ -ಭೂಮಿ, ಪುಣ್ಯಭೂಮಿ ಎನ್ನಿಸಿಕೊಂಡು ಮೆರೆದ ನಮ್ಮ ನಾಡಿನಲ್ಲಿ ಆಧ್ಯಾತ್ಮವಿದ್ಯೆ ಅಪಾರವಾಗಿ ಬೆಳೆದಿದೆ-ಬಹುಶಃ ಇನ್ನು ಬೆಳೆಯಲು ಸಾಧ್ಯವೇ ಇಲ್ಲ ಎನ್ನುವಷ್ಟುಮಟ್ಟಿಗೆ, ಆಧ್ಯಾತ್ಮವಿದ್ಯಾವಲಯದಲ್ಲಿ ಹೇಳಬಹುದಾದ ಕೊನೆಯಮಾತು ಈ ನಾಡಿನಲ್ಲಿ ಶತಮಾನಗಳಹಿಂದೆಯೇ ಹೇಳಿಯಾಗಿದೆ ಎಂದೂ ಹೇಳಬಹುದು. ಇನ್ನು ಯಾವುದಕ್ಕೆ ದಾರಿದ್ರ್ಯ ಇಂದು ನಮಗಿದ್ದರೂ, ಈ ಆಧ್ಯಾತ್ಮವಿದ್ಯಾವೈವಿಧ್ಯವೈಭವಗಳಿಗೆ ಖಂಡಿತವಾಗಿಯೂ ನಮಗೆ ಬಡತನವಿಲ್ಲ! ಆದರೆ ಅದರ ಪ್ರಯೋಗವಿದ್ಯೆಯಲ್ಲಿ ಮಾತ್ರ ಈಚೆಗೆ ನಾವು ಬಡವರಾಗಿರುವುದು ವಿಷಾದಕರ ಅಷ್ಟೆ. ಈ ಸಂಪತ್ತು ಇಂದು ನಮ್ಮ ಗತವೈಭವದ ಕನಸಾಗಿದೆ; ಉದ್ದುದ್ದ ಉಪನ್ಯಾಸಗಳಿಗೆ ಒದಗಿಬರುವ ವಸ್ತುಮಾತ್ರ ಆಗಿದೆ ಎಂದು ನೆನೆದರೆ ವ್ಯಸನವಾಗುತ್ತದೆ .

ಅಳಿದುಹೋಗುತ್ತಿರುವ ಈ ಆಧ್ಯಾತ್ಮವಿದ್ಯೆಯ ಪ್ರಯೋಗವನ್ನು ನಾವು ಜೀವನದಲ್ಲಿ ನಡೆಸಿ ಇಹ-ಪರಗಳೆರಡಕ್ಕೂ ಸಾಧನೆ ಮಾಡಿಕೊಳ್ಳ-ಬೇಕಾದುದೇ ಇಂದು ನಮ್ಮ ಕರ್ತವ್ಯವಾಗಿದೆಯಲ್ಲವೇ?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವಮುಂಚೆ ನಾವು ಬ್ರಿಟಿಷರ ಆಡಳಿತದಲ್ಲಿದ್ದಾಗ, ಆ ಆಳರಸರನ್ನು ಮನವೊಲಿಸಿ ಅಧಿಕಾರ, ಸ್ಥಾನ, ಮಾನ, ಸಂಪತ್ತು ಪ್ರತಿಷ್ಠೆಗಳನ್ನು ಪಡೆಯುವುದೇ ನಮ್ಮ ದೇಶದ ಯುವಕರ ಹೆಬ್ಬಯಕೆಯೂ, ಗುರಿಯೂ ಆಗಿತ್ತು. ಶತಮಾನಕಾಲ ಹೀಗೆ ನಡೆದಮೇಲೆ ಅವರು ಕೊಟ್ಟ ಆ ದೇಶದ ಅವಿದ್ಯೆಯಲ್ಲೇ ತಯಾರಾದರೂ, ಅವರ ಆ ಸ್ವಾತಂತ್ರ್ಯ ಮನೋವೃತ್ತಿ ನಮಗೂ ಹರಿದು ಬಂದು, ಹಲವರು ನಮ್ಮ ದೇಶಸ್ವತಂತ್ರವಾಗಬೇಕು ಎಂಬ ಕನಸನ್ನು ಕಂಡು ಭಾರತಮಾತೆಯ ಬಂಧವಿಮೋಚನೆಗೆ ಪಣತೊಟ್ಟು ಕಷ್ಟನಷ್ಟಗಳನ್ನು ಹೊಂದಿ ಹೆದರದೇ ಹೆಣಗಾಡಿದರು. ಆಗ ಎಲ್ಲರ ಗುರಿಯೂ ಒಂದೇ ಆಗಿತ್ತು- ಸ್ವರಾಜ್ಯ ಸಂಪಾದನೆ. ಅನೇಕ ವರ್ಷಗಳ ಸತ್ಯಾಗ್ರಹ ಚಳುವಳಿಯ ಅಹಿಂಸಾಯುದ್ಧ ನಡೆದು ಅಂತೂ ಕೊನೆಗೊಮ್ಮೆ ಅನಿವಾರ್ಯವಾಗಿ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕಾಯಿತು! ಹಾಗೆ ಹೋಗುವಾಗಲೂ ಅವರು ಮಾತ್ಸರ್ಯ-ಕೀಟಲೆ ಬುದ್ಧಿವಂತಿಕೆ-ಯಿಂದ ನಮ್ಮ ದೇಶದ ಆಡಳಿತದಲ್ಲಿ ಹಲವು ತೊಡಕಿನ ಸಮಸ್ಯೆಗಳನ್ನು ನಮ್ಮ ತಲೆಯಮೇಲಿಟ್ಟು ಹೋದರು. ದೇಶವನ್ನು ಎರಡು ಹೋಳಾಗಿ ಒಡೆದು ಹೋದರು. ಬುದ್ಧಿವಂತರೂ ತ್ಯಾಗಶೀಲರೂ ದಕ್ಷರೂ ಆಡಳಿತಕುಶಲರೂ ಆದ ನಾಯಕರ ಕೈಗೆ ದೇಶ ಸಿಕ್ಕಿದುದರಿಂದ ಭಾರತ ಇಷ್ಟುಮಟ್ಟಿಗಾದರೂ ತಲೆಯೆತ್ತಿ ಇಂದು ನಿಲ್ಲುವಂತಾಯಿತು.

ಆದರೆ ಜಾತಿದ್ವೇಷ ಭಾಷಾದ್ವೇಷಗಳೆಂಬ ಎರಡು ಬೇನೆಗಳು ಹಿರಿದಾಗಿ ಈಗಲೂ ನಮ್ಮ ದೇಶವನ್ನು ಒಳಗೇ ಕೊರೆಯುತ್ತಿರುವುದನ್ನು ನಾವು ಗಮನಿಸಬಹುದು. ಮತದ್ವೇಷವನ್ನು ಕಡಿಮೆ ಮಾಡಲು ಹಿರಿಯನಾಯಕರು ಪ್ರಯತ್ನಪಡುತ್ತಿದ್ದರೂ, ನಮ್ಮ ರಾಜ್ಯಾಂಗದಲ್ಲೇ ದೊಡ್ಡದೊಡ್ಡ ಆದರ್ಶ ಮಾತುಗಳನ್ನು-ತತ್ತ್ವಗಳನ್ನು ನಾವು ಅಳವಡಿಸಿಕೊಂಡಿದ್ದರೂ, ಕಾರ್ಯತಃ ಅವುಗಳನ್ನು ಪಾಲಿಸುತ್ತಿಲ್ಲವೆಂದು ವಿಷಾದದಿಂದ ಒಪ್ಪಿಕೊಳ್ಳಬೇಕಾಗಿದೆ. ಹಲವು ರಾಜ್ಯಗಳಲ್ಲಿಯೂ ಈ ಬೇನೆ ಐಕಮತ್ಯಕ್ಕೆ ಶೂಲವಾಗಿ ಪರಿಣಮಿಸುತ್ತಿದೆ. ಭಾಷಾಸಮಸ್ಯೆಯನ್ನು ಬಿಡಿಸಹೊರಟು ಭಾಷಾವಾರು ಪ್ರಾಂತಗಳನ್ನು ಮಾಡಿಕೊಂಡಿದ್ದರೂ,ಈ ಸಮಸ್ಯೆ ಪೂರ್ಣವಾಗಿ ಬಗೆಹರಿದಿಲ್ಲ. ರಾಷ್ಟ್ರಭಾಷೆ ಹಿಂದಿಯಸ್ಥಾನದ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದಿದೆ. ಹಿಂದಿಯನ್ನು ಬಲವಂತವಾಗಿ ಎಲ್ಲರ ತಲೆಯಮೇಲೂ ಹೊರಿಸುವ ಯೋಜನೆಗಳನ್ನು ಕಾಣುತ್ತಿದ್ದೇವೆ. ಅನೇಕ ವಿದ್ವಾಂಸರೂ ರಾಜಕಾರಣಿಗಳೂ ಇದನ್ನು ಪ್ರತಿಭಟಿಸು-ತ್ತಿದ್ದರೂ ಪ್ರಯೋಜನ ಕಂಡುಬರುತ್ತಿಲ್ಲ.

ಇಷ್ಟಿದ್ದರೂ ನೆರೆಯ ರಾಷ್ಟ್ರಕ್ಕಿಂತ ಎಷ್ಟೋಪಟ್ಟು ಚೆನ್ನಾಗಿ ನಾವು ಬಾಳುತ್ತಿದ್ದೇವೆ. ಸಂಪಾದಿಸಿದ ಸ್ವರಾಜ್ಯವನ್ನು ಕಾಪಾಡಿಕೊಳ್ಳಲು ಸಮರ್ಥರಹುದೆಂದು ಸಾಧಿಸಿತೋರಿಸುತ್ತಿದ್ದೇವೆ ಎಂದೇನೋ ಹೇಳಬಹುದು.

ಬ್ರಿಟಿಷರಕಾಲದಲ್ಲಿ ಅವರನ್ನು ಒಲಿಸಲು ಪ್ರಯತ್ನಪಡುತ್ತಿದ್ದವರು, ಈಗ ಸ್ವತಂತ್ರರಾದುದರಿಂದ ತಮ್ಮಲ್ಲೇ ವ್ಯಾಜ್ಯಕ್ಕೆ ನಿಂತಿದ್ದಾರೆ. ಅಧಿಕಾರ ಲಾಲಸೆ, ಸ್ವಜನಪ್ರೇಮ, ಸಾಜಾತ್ಯಾಭಿಮಾನ, ಪ್ರಾಂತವಿಶ್ವಾಸ ಮುಂತಾದುವು ಈಗ ತಲೆಯೆತ್ತಿ ನಿಂತಿವೆ-ಪ್ರಗತಿಗೆ ಅಡ್ಡವಾಗಿ. ಯೋಗ್ಯತೆಗೆ ನಿಷ್ಠೆಗೆ ಬೆಲೆ ಸಿಗುವುದು ಕಷ್ಟವಾಗಿದೆ ಈ ದೇಶದಲ್ಲಿ! ತಿಕ್ಕಾಟಗಳು ಹೆಚ್ಚಾಗುತ್ತಿವೆ. ಆರ್ಥಿಕಸ್ಥಿತಿ ಹದಗೆಡುತ್ತಿವೆ. ಉದ್ಯೋಗಸೌಕರ್ಯ ಕಡಿಮೆಯಾಗಿದೆ. ಉದ್ಯೋಗ ಬಯಸುವವರು ಹೆಚ್ಚಾಗಿದ್ದಾರೆ. ಒಂದುಕಡೆ ವಿದ್ಯಾಭ್ಯಾಸ ಹರಡುತ್ತಿದ್ದರೆ ಮತ್ತೊಂದು ಕಡೆ ಬೇಕಾದ ವಿದ್ಯೆ ಲಭಿಸುತ್ತಿಲ್ಲ. ಲಭಿಸಿದ ವಿದ್ಯೆಗೂ ಪುರಸ್ಕಾರವಿಲ್ಲ ! ಒಟ್ಟಿನಲ್ಲಿ ಜನತೆಗೆ ನೆಮ್ಮದಿ ಇಲ್ಲವಾಗಿದೆ.

ಇಂತಹ ತೊಳಲಾಟದ ಜೀವನವನ್ನು ಎದುರಿಸುತ್ತಿರುವ ನಮ್ಮದೇಶದ ಯುವಕಸಂಪತ್ತು , ನಮ್ಮ ಪ್ರಾಚೀನಬೋಧೆಗೆ, ಆಧ್ಯಾತ್ಮವಿದ್ಯೆಗೆ ಎಷ್ಟುಮಟ್ಟಿಗೆ ಗಮನ ಕೊಡಬಹುದು ಎಂಬುದು ಯೋಚನೆಮಾಡಬೇಕಾದಂತಹ ವಿಷಯವೇ ಸರಿ. ಎಡರು ಎದುರಿಸುವುದರಲ್ಲೇ ಮಗ್ನರಾದ ಜನ ಬೇರೆಕಡೆಗೆ ಮನಸ್ಸು ಕೊಡುವುದು ಹೇಗೆ? ನೆಮ್ಮದಿ ಇದ್ದರೆ, ಸುಖವಾಗಿ ದಿಮ್ಮನಿರುವುದುಬಿಟ್ಟು ಬೇರೆ ಯೋಚನೆ ಏತಕ್ಕೆ? ಹೀಗಾಗಬಾರದು ನಮ್ಮ ರೀತಿ-ನೀತಿ.ನೆಮ್ಮದಿಯೇ ಇರಲಿ, ಎಡರುಗಳೇ ಬಂದಿರಲಿ, ನಮ್ಮ ಮನಸ್ಸನ್ನು ಸ್ತಿಮಿತವಾಗಿಡುವಕಡೆಗೆ ನಮ್ಮ ಗಮನವಿರಬೇಕಲ್ಲವೇ? ಈ ಮನಸ್ಸನ್ನು ಸ್ತಿಮಿತದಲ್ಲಿಡುವಕಾರ್ಯ ಸಾಧಿತವಾಗುವ ಒಂದೇ ಮಾರ್ಗವೆಂದರೆ ಆಧ್ಯಾತ್ಮವಿದ್ಯಾವ್ಯಾಸಂಗ. ಸಮಸ್ಥಿತಿ ಬರುವುದು ಓದಿದ ಸಿದ್ಧಾಂತವನ್ನು ಆಚರಣೆಯಲ್ಲಿ ತಂದಾಗ ಮಾತ್ರ.

ನಮ್ಮ ಪೂರ್ವಿಕರು ಆರ್ಜಿಸಿ ನಮಗಿಟ್ಟ ಸಂಪತ್ತು ಲೌಕಿಕವಾಗಿ ಇಂದು ನಮಗೇನೂ ಉಳಿದಿಲ್ಲ. ಅಳಿದುಳಿದ ಸಂಪತ್ತನ್ನೂ ಪರದೇಶದ ಜನ ಒಬ್ಬರಾದ ಮೇಲೊಬ್ಬರು ಬಂದು ದೋಚಿ ಕೊಳ್ಳೆಹೊಡೆದುಕೊಂಡುಹೋದರು. ಶತಮಾನಗಳ ಕಾಲ ಅವ್ಯಾಹತವಾಗಿ ಈ ಕೊಳ್ಳೇ ಸುಲಿಗೆ ನಡೆಯಿತು. ಎಂದಮೇಲೆ ನಮ್ಮಲ್ಲಿ ಇನ್ನೂ ನಮ್ಮದು ಎಂಬುವ ಲೌಕಿಕಸಂಪತ್ತು ಏನು ಉಳಿದಿದ್ದೀತು? ಆದರೆ ಈ ಎಲ್ಲ ಕೊಳ್ಳೆಹೊಡೆದವರು ಕೂಡ ಸುಲಿಯಲು ಸಾಧ್ಯವಲ್ಲದ ಒಂದು ಶಾಶ್ವತಸಂಪತ್ತು ನಮ್ಮಲ್ಲಿ ಚಿರವಾಗಿ ಉಳಿಯಿತು. ಅದೇ ನಮ್ಮ ಸಂಸ್ಕೃತಿ- ಅದೇ ನಮ್ಮ ತತ್ತ್ವಶಾಸ್ತ್ರಸಂಪತ್ತು. ಆದರೆ ಉಳಿದಿರುವ ಈ ಸಂಪತ್ತು ನಮಗೆ ಇಂದು ಬೇಡವಾಗಿದೆ! ಏಕೆ? ಉತ್ತರ ಬಹುಸುಲಭ. ಈ ವಿದ್ಯೆಯಿಂದ ನಮ್ಮ ಜೀವನ-ಉದರಂಭರಣ ಸಾಗುವುದು ದುರ್ಲಭ ಎಂಬುದೇ ಆ ಸುಲಭ ಉತ್ತರ! ಮತ್ತು ಅದಕ್ಕೆ ಕಾರಣ. ಆದರೆ ಕೇವಲ ಈ ಒಂದು ಕಾರಣದಿಂದ ನಾವು ನಮ್ಮ ಆ ಅಗಾಧಸಂಪತ್ತನ್ನು

ನಿರ್ಲಕ್ಷಿಸಿದರೆ ಅದರಿಂದಾಗುವ ನಷ್ಟ ನಮಗೆ ಅಪಾರ! ಅಧ್ಯಾತ್ಮವಿದ್ಯಾಸಂಪಾದನೆಯ ಗುರಿ ಅನ್ನಸಂಪಾದನೆಯಾಗಬಾರದು. ಅದು ಬಹುಶಃ ಯಾವ ಕಾಲದಲ್ಲೂ ಹಾಗಿರಲಿಲ್ಲವೆಂದೇ ಹೇಳಬಹುದು. ಜೀವನ ನಿರ್ವಹಣೆಗಾಗಿ ನಮ್ಮ ನಮ್ಮ ಯೋಗ್ಯತೆ ಸನ್ನಿವೇಶ ಅವಕಾಶ ಅದೃಷ್ಟಗಳನ್ನನುಸರಿಸಿ ಯಾವುದೋ ವೃತ್ತಿಯನ್ನು ಅವಲಂಬಿಸುತ್ತೇವೆ. ದುಃಖವೋ ಸಂತೋಷವೋ; ಕಷ್ಟವೋ ಸುಖವೋ ಅದನ್ನು ಬಿಡಲು ಸಾಧ್ಯವಿಲ್ಲ. ಅನಿವಾರ್ಯವಾಗಿ ಅದನ್ನೊಂದನ್ನು ಇಂದು ನಾವು ಅನುಸರಿಸಲೇ ಬೇಕು- ಅಪೂರ್ವವಾಗಿ ಎಲ್ಲೋ ಬೆರಳೆಣಿಸುವಷ್ಟು ಅಲ್ಪಸಂಖ್ಯೆಯ ಅದೃಷ್ಟವಂತರನ್ನುಳಿದು-ಎಲ್ಲರೂ. ಆದರೆ ಅದಕ್ಕೂ ಇಂದು ನಮಗೆ ಅನೇಕ ಅಡಚಣೆಗಳುಂಟು, ನಿಜ. ಆದರೂ ನಾವು ಹೆಣಗಲೇಬೇಕಾಗಿದೆ. ಆದರೆ ಈ ಹೆಣಗಾಟ-ತೊಳಲಾಟಗಳಲ್ಲಿ ನಮ್ಮ ಆತ್ಮೋದ್ಧಾರವಾಗುವ ಆಧ್ಯಾತ್ಮವಿದ್ಯಾಸಂಪತ್ತನ್ನು ನಾವು ನಿರ್ಲಕ್ಷಿಸತಕ್ಕದ್ದಲ್ಲ ಎಂಬುದನ್ನು ಚೆನ್ನಾಗಿ ವಿಚಾರಮಾಡಬೇಕಾಗಿದೆ.

ಆಲಸಿಕೆಯ ಉಪಾಸಕರಾಗಿ, ಇಂದ್ರಿಯಸುಖದ ದಾಸರಾಗಿ, ಐಶ್ವರ್ಯಅಧಿಕಾರಪ್ರಲೋಭನೆಗಳ ಸುಳಿಯಲ್ಲಿ ಸಿಕ್ಕಿಬಿದ್ದು ಧರ್ಮಭ್ರಷ್ಟರಾಗ ಬಾರದೆಂಬ ಮುಖ್ಯವಿಷಯವನ್ನು ನಾವು ನೆನಪಿನಲ್ಲಿಡಬೇಕು. ನೈತಿಕಪತನ ಮಹಾ ಆತ್ಮದ್ರೋಹವೆಂಬುದನ್ನು ಮನಗಾಣಬೇಕು. ''ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧಾರ್ಮಿಕತೇಜಸ್ಸನ್ನು ನಾವು ಸಂಪಾದಿಸಬೇಕಾಗಿದೆ. ನಮ್ಮ ಸಂಪ್ರದಾಯಗಳಲ್ಲಿ ಗೌರವಬುದ್ಧಿಯನ್ನು ನಾವು ಬೆಳೆಸಿಕೊಂಡು ವಿಚಾರಮಾಡಬೇಕು. ಅವುಗಳ ಅರ್ಥವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅರ್ಥವಿಲ್ಲದ ಅನುಸರಣೆ ಕೂಡದು ಎಂದು ಬಿಟ್ಟುಬಿಡುವುದರ ಬದಲು, ಅವಿಚಾರದಿಂದ ಕಣ್ಣುಮುಚ್ಚಿಕುಳಿತು ತೆಗಳುವುದಕ್ಕಿಂತಲೂ ಆಲೋಚನೆಮಾಡಿ ತಿಳಿದು ಆಚರಿಸುವುದು ಮೇಲಲ್ಲವೇ? ಹೊಟ್ಟೆಗಾಗಿ ಆತ್ಮಾಭಿಮಾನ ಧರ್ಮಾಭಿಮಾನಗಳನ್ನು ಮಾರಿಕೊಳ್ಳುವ ದುರ್ವ್ಯಸನಕ್ಕೆ ಯುವಕರು ಎಂದೂ ಬಲಿಯಾಗಬಾರದು.

ಧರ್ಮಶ್ರದ್ಧೆಯಿಂದ, ಪ್ರಾಮಾಣಿಕಬುದ್ಧಿಯಿಂದ, ನಿರ್ಮಲಹೃದಯದಿಂದ ಜೀವನವನ್ನು ನಡೆಸುವ-ಬದುಕನ್ನು ಬೆಳಗಿಸುವ ಧ್ಯೇಯ ನಮ್ಮದಾಗಿರಬೇಕು. ''ಸಂಶಯಾತ್ಮಾ ವಿನಶ್ಯತಿ''. ಬಿಡಿಸಲಾಗದ ಸಮಸ್ಯಾತ್ಮಕ ಸಂಶಯಾತ್ಮಕ ಬದುಕು ಬದುಕಲ್ಲ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಪೂರ್ವಸಂಸ್ಕೃತಿ-ಧರ್ಮ ಒಂದು ಕಡೆ, ಪರರಾಷ್ಟ್ರಗಳಿಂದ ಬಂದೆರಗಿದ ಆಧುನಿಕ ನಾಗರಿಕತೆ ಒಂದುಕಡೆ, ನಮ್ಮನ್ನು ಇಂದು ಇಕ್ಕಟ್ಟಿಗೆ ಸಿಕ್ಕಿಸಿದೆ. ಇವೆರಡರಲ್ಲೂ ಸುಲಭವಾಗಿರುವುದನ್ನು ಮಾತ್ರ ನಾವು ಇಂದು ಆರಿಸಿಕೊಂಡು, ಅದೂ ಇಲ್ಲ ಇದೂ ಇಲ್ಲ ಎಂಬಂತೆ ಆಗಿದ್ದೇವೆ! ಇವೆರಡರಲ್ಲೂ ವಿಹಿತವಾದ ಅನುಕರಣೀಯವಾದ ಅಂಶಗಳನ್ನು ನಾವು ವಿಚಾರಮಾಡಿ ಅರಿತುಕೊಂಡು ಅನುಸರಿಸಬೇಕಾಗಿದೆ. ನಮ್ಮ ಸೌಲಭ್ಯಕ್ಕೆ ತಕ್ಕಂತೆ ಸೋಮಾರಿತನಕ್ಕೆ ಸರಿಯಾಗಿ ಅಳವಡಿಸಿಕೊಂಡು ಆರಿಸಿಕೊಳ್ಳುವುದಲ್ಲ. ಇದಕ್ಕೆ ವಿಚಾರಶಕ್ತಿ ಅಗತ್ಯ. ಈ ಶಕ್ತಿ ನಮ್ಮಲ್ಲಿ ಬೆಳೆಯಬೇಕಾಗಿದೆ.

ಹೇಡಿತನ, ಔದಾಸೀನ್ಯ, ಸೋಮಾರಿತನಗಳು ಯುವಕರಲ್ಲಿರಬಾರದು. ಪರಸ್ಪರಕಲಹ, ಸ್ವಾರ್ಥ,ದುರಾಸೆ, ಒಣಪ್ರತಿಷ್ಠೆ, ದುರಹಂಕಾರಗಳನ್ನು ದೂರಮಾಡಿ, ಧರ್ಮಲತೆ ಒಣಗದಂತೆ ನಾವು ನೋಡಿಕೊಳ್ಳಬೇಕಾಗಿದೆ. ವಿಶಾಲಮನೋಭಾವ, ಆತ್ಮಹಿತ, ಸಮಾಜಹಿತ, ದೇಶಹಿತ, ವಿಶ್ವಕಲ್ಯಾಣಗಳ ದೊಡ್ಡಗುರಿ ನಮ್ಮದಾಗಿರಬೇಕು. ದೈವಭಕ್ತಿ , ಧರ್ಮಶ್ರದ್ಧೆಗಳೆಂಬ ಎರಡು ಚಕ್ರಗಳಮೇಲೆ ಯುವಕಜೀವನ ನಿಂತರೆ ನಮಗೆ ಶಾಂತಿಸಮಾಧಾನಗಳು ಸಾಧ್ಯ. ಇಲ್ಲದಿದ್ದರೆ ಸಮಾಜಕ್ಕೆ ಈದೇಶಕ್ಕೆ ಭವಿಷ್ಯ ಆಶಾದಾಯಕವಲ್ಲ. ಪ್ರಗತಿಯೂ ಸಾಧ್ಯವಿಲ್ಲ. ಉಳಿದರೀತಿಯಲ್ಲಿ ಒಂದುವೇಳೆ ಪ್ರಗತಿಸಾಧನೆಯಾದರೂ ನಮಗೆ ಅದು ಲಾಭವೂ ಅಲ್ಲ, ಶ್ರೇಯಸ್ಕರವೂ ಅಲ್ಲ, ಅದು ನಮಗೆ ಇಷ್ಟವೂ ಅಲ್ಲ. ನಮ್ಮ ಜೀವನ ಸದಾ ಸನ್ಮಾರ್ಗಪ್ರವರ್ತವಾಗಬೇಕು. ಎಂದರೆ ಭಗವದಾರಾಧನೆಯಗುರಿ ನಮ್ಮೆಲ್ಲ ಕಾರ್ಯಗಳಲ್ಲೂ ಅವಶ್ಯಕವಾಗಿ ಇರಬೇಕು. ಇಹಪರಸಾಧಕವಾದ ಕಾರ್ಯದ ಕಡೆಗೇ ನಮ್ಮ ಗಮನ ಹರಿಯಬೇಕು. ನಮ್ಮ ಪ್ರತಿಯೊಂದು ಕಾರ್ಯದಲ್ಲೂ ಸಾತ್ವಿಕಪ್ರವೃತ್ತಿ ನಮ್ಮನ್ನು ನಡೆಸುವಂತಿರಬೇಕು. ಇದು ನಮಗೆ ನಮ್ಮ ಹಿರಿಯರು ಹಾಕಿಕೊಟ್ಟಿರುವ ಸುಮಾರ್ಗ. ಇದನ್ನು ಮರೆತು ನಾವು ಉಳಿದುದೇನು ಸಾಧಿಸಿದರೂ, ಅದು ನಮಗೆ ಪ್ರಯೋಜನಕಾರಿ-ಯಾಗಲಾರದು.

"Seek not what ye eat nor what raiments ye wear; seek ye first, the kingdom of God and everything else will be added on unto you" ಎಂದು ಆಂಗ್ಲರು ಹೇಳುತ್ತಾರೆ. ನಾಸ್ತಿಕರೆಂದು ನಾವು ಕರೆಯುವ ಅವರೇ ಈ ತತ್ವವನ್ನು ಹೇಳುತ್ತಾರೆಂದ ಮೇಲೆ, ಸಮಸ್ತ ತತ್ತ್ವರತ್ನಕರಂಡದಂತಿರುವ, ಆಧ್ಯಾತ್ಮದ ತವರೂರಾದ ಈ ಪುಣ್ಯಭೂಮಿಯಲ್ಲಿ ಹುಟ್ಟಿದ ಭಾರತಮಾತೆಯ ಸುಪುತ್ರರು ಹೇಗಿರಬೇಕು ಎಂಬುದನ್ನು ಯುವಕರು ಇಂದು ಆಲೋಚಿಸಬೇಕಾಗಿದೆ.

''ತದೇವಂ ವಿರಕ್ತಿಭಕ್ತ್ಯಾಪ್ತಿಜನಿತಭಗವತ್ಸಾಕ್ಷಾತ್ಕಾರೋದಿತಾಖಿಲಪುರುಷಾರ್ಥಪ್ರವರಕೈವಲ್ಯಸಿದ್ಧೇಃ ಭಗವಾನ್ನಾರಾಯಣೋ ನಿರ್ದೋಷತಯಾ ಗುಣಪೂರ್ಣತಯಾ ಜಿಜ್ಞಾಸ್ಯಃ''-----ಶ್ರೀ ಟೀಕಾಕೃತ್ಪಾದರು.

''ತ್ರಿದಿವಾದಿಲಭ್ಯಮಪಿನಾಸ್ಯ ಫಲಂ ಕಥಿತಂ ಕೃಷೇರಿವ ಪಲಾಲಕುಲಂ।
ಸ್ವಫಲಂತು ಮುಕ್ತಿಪದಮುಕ್ತಪದಂ ಶುಕಶಾರದಾದಿಪರಮಾರ್ಥವಿದಾಂ ॥''----ಶ್ರೀ ನಾರಾಯಣಪಂಡಿತಾಚಾರ್ಯರು.

ಈ ವಾಕ್ಯಗಳಲ್ಲಿ ಮೇಲಿನ ಇಂಗ್ಲೀಷರ ಮಾತಿನ ಅರ್ಥ ಸ್ಪಷ್ಟವಾಗಿ ಇನ್ನೂ ನಿಷ್ಕೃಷ್ಟವಾಗಿ ಬಂದಿದೆ!.

ಸಮಸ್ತಗುಣಸಂಪೂರ್ಣನೂ, ದೋಷಲೇಶರಹಿತನೂ, ಸರ್ವತಂತ್ರಸ್ವತಂತ್ರನೂ, ಸೃಷ್ಟ್ಯಾದ್ಯಷ್ಟಕರ್ತನೂ, ಸರ್ವವ್ಯಾಪ್ತನೂ, ಕರುಣೆಯ ಕಡಲಾದವನೂ, ಭಕ್ತವತ್ಸಲನೂ, ಸಕಲರ ಅಂತರ್ಯಾಮಿಯೂ, ಸಕಲರ ಸ್ವಾಮಿಯೂ ಆದ ಪರಮಾಪ್ತ ಪರಮಾತ್ಮನೊಬ್ಬನಿರುವನೆಂದು ಮೊದಲು ನಾವು ತಿಳಿದು ದೃಢವಾಗಿ ನಂಬಬೇಕು. ಅನಂತರ ನಮ್ಮೊಳಗೆ ಇರುವ ಅವನನ್ನು ಅವನ ಪರಿವಾರದವರನ್ನು-ತತ್ತ್ವಾಭಿಮಾನಿದೇವತೆಗಳನ್ನು-ಒಪ್ಪಿಸುವಂತಹ ಸತ್ಕಾರ್ಯಗಳನ್ನು ನಾವು ಮಾಡಬೇಕು-ಎಂಬ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಈ ಮಾರ್ಗದಲ್ಲಿ ಹೊರಟವನಿಗೆ ಯಾವ ತೊಂದರೆಯೂ ಯಾವಾಗಲೂ ಇರಲಾರದು.

''ಹಲವು ಬಗೆಯಲಿ ಹರಿಯ ಮನದೊಳ। ಗೊಲಿಸಿ ನಿಲ್ಲಿಸಿ ಏನುಮಾಡುವ ।ಕೆಲಸಗಳು ಅವನಂಘ್ರಿಪೂಜೆಗಳೆಂದು ನೆನೆಯುತಿರು ॥
ಹಲಧರಾನುಜ ತಾನೆ ಸರ್ವ। ಸ್ಥಳಗಳಲಿ ನೆಲೆಸಿದ್ದು ನಿಶ್ಚಂ।ಚಲ ಭಕುತಿ ಸುಜ್ಞಾನ ಭಾಗ್ಯವ ಕೊಟ್ಟು ಸಂತೈಪ ॥''
''ಒಡಲ ನೆಳಲಂದದಿ ಹರಿ ! ನಮ್ಮೊಡನೆ ತಿರುಗುವ।
ಒಂದರೆಕ್ಷಣಬಿಡದೆ ಬೆಂಬಲವಾಗಿ ಭಕ್ತರಧೀನನೆಂದೆನಿಸಿ ॥''
'' ದೇವಗಂಗೆಯೊಳುಳ್ಳವಗೆ ದುರಿ। ತಾವಳಿಗಳುಂಟೇ ವಿಚಾರಿಸೆ। ಪಾವುಗಳ ಭಯವುಂಟೆ ವಿಹಗಾಧಿಪನ ಮಂದಿರದಿ ॥

## 2. ಯುವಕರ ಕರ್ತವ್ಯ

ಜೀವಕರ್ತೃತ್ವವನು ಮರೆದು ಪ । ರಾವರೇಶನೆ ಕರ್ತೃಯೆಂದರಿ । ದಾವ ಕರ್ಮವ ಮಾಡಿದರು ಲೇಪಿಸವು ಕರ್ಮಗಳು ॥'' -- ಹರಿಕಥಾಮೃತಸಾರ.

ಪರಮಾತ್ಮನ ಅಗಾಧಶಕ್ತಿಯನ್ನೂ ನಮ್ಮ ಅಲ್ಪತ್ವವನ್ನೂ ಚಿಂತಿಸಬೇಕು-

''ಅಸ್ವತಂತ್ರನು ಜೀವ ಹರಿ ಸ। ರ್ವಸ್ವತಂತ್ರನು ನಿತ್ಯಸುಖಮಯ । ನಿಸ್ವಬದ್ಧಲ್ಪಜ್ಞಶಕ್ತ ಸದುಃಖಿ ನಿರ್ವಿಣ್ಣ॥
ಹ್ರಸ್ವದೇಹಿ ಸನಾಥ ಜೀವನು । ವಿಶ್ವವ್ಯಾಪಕ ಕರ್ತೃಬ್ರಹ್ಮ ಸ । ರಸ್ವತೀಶಾದ್ಯಮರನುತ ಹರಿಯೆಂದು ಕೊಂಡಾಡು ॥ -- ಹರಿಕಥಾಮೃತಸಾರ.

ಸಕಲವೂ, ಶ್ರೀ ಹರಿಯ ಇಚ್ಛೆಯೇ. ಅವನ ಸತ್ಯಸಂಕಲ್ಪಪ್ರೇರಣೆಗನುಸಾರವಾಗಿಯೇ ಎಲ್ಲವೂ ನಡೆಯುವುದು. ''ತೇನ ವಿನಾ ತೃಣಮಪಿ ನ ಚಲತಿ''. ಅವನೇ ಎಲ್ಲವನ್ನೂ 'ಮಾಡಿ ಮಾಡಿಸುವನು' ಎಂಬ ತತ್ತ್ವದ ಬೆಳಕಿನಲ್ಲಿ ವಿಚಾರಮಾಡುವವನಿಗೆ ತೊಂದರೆ, ಕಷ್ಟ, ಅಡ್ಡಿ, ಆತಂಕ, ನೋವು, ನಿರಾಶೆ ಎಲ್ಲಿಯದು ?

''ಜನಕ ತನ್ನಾತ್ಮಜಕೆ ವರ ಭೂ । ಷಣ ದುಕೂಲವ ತೊಡಿಸಿ ತಾ ವಂ । ದನೆಯ ಕೈಕೊಳುತವನ ಹರಸುತ ಹರುಷಪಡುವಂತೆ ॥
ವನರುಹೇಕ್ಷಣ ಪೂಜ್ಯಪೂಜಕ । ನೆನಿಸಿ ಪೂಜಾಸಾಧನ ಪದಾ । ರ್ಥನು ತನಗೆ ತಾನಾಗಿ ಫಲಗಳನೀವ ಭಜಕರಿಗೆ ॥'' -- ಹರಿಕಥಾಮೃತಸಾರ.

ಈ ನಂಬಿಕೆ ದೃಢವಾಗಿ ಸದಾ ಜಾಗೃತವಾಗಿರುವುದು ಆವಶ್ಯಕ ! ಆದರೆ ಅದು ಕಷ್ಟ, ಅಭ್ಯಾಸದಿಂದ ಯೋಗ್ಯತಾನುಸಾರವಾಗಿ ಶ್ರೀಹರಿವಾಯುಗಳ ಕೃಪೆಯಿಂದ ಬರಬೇಕು. ಆ ಕಡೆಗೆ ನಮ್ಮ ಗಮನವಿರಬೇಕು. ಆಗ ನಮ್ಮ ಸಮಸ್ಯೆಗಳೆಲ್ಲ ತಾವಾಗಿಯೇ ಪರಿಹಾರವಾಗುತ್ತವೆ. ಈ ದಾರ್ಢ್ಯವೂ ಸುಮ್ಮನೇ ಲಭ್ಯವಾಗದು. ಅದಕ್ಕೆ ಪರಮಾತ್ಮನ ಗುಣಗಳ ಮಹಿಮೆಯ, ಅವನ ಭಕ್ತರ ಕಥೆಗಳ ಶ್ರವಣಮನನ ನಿಧಿಧ್ಯಾಸನ ಅಗತ್ಯ. ಶಾಸ್ತ್ರಶ್ರವಣ, ವ್ಯಾಸಂಗ, ಆ ತತ್ತ್ವಗಳ ಮನನಧ್ಯಾನಗಳೂ ಬೇಕು. ಇದನ್ನು ನಮ್ಮ ಕೈಲಾದಷ್ಟು ಅಗತ್ಯವಾಗಿ ನಾವು ಮಾಡಬೇಕಾಗುತ್ತದೆ. ಅವರ ಮಾತುಗಳಿಗೆ ವಿರೋಧಬಾರದಂತೆ ನಾವು ನಡೆದುಕೊಂಡು ಅವರ ಕೃಪೆಯನ್ನು ಸಂಪಾದಿಸಬೇಕಾಗುತ್ತದೆ. ಇದು ನಿಧಾನವಾಗಿ ಆಗಬೇಕಾದ ಕೆಲಸ. ಒಂದು ಜನ್ಮದಲ್ಲೂ ಮುಗಿಯುವ ಕೆಲಸವಲ್ಲ! ಆಗುವ ಸಾಧನೆಯೂ ಅಲ್ಲ ! ಯೋಗ್ಯತಾನುಸಾರವಾಗಿ ಎಷ್ಟು ಜನ್ಮಗಳು ಬೇಕೋ ಹೇಳಲು ಬರುವುದಿಲ್ಲ! ಆದರೂ ತಾಳ್ಮೆಯಿಂದ ಈ ಮನೋಭಾವವನ್ನು ಬೆಳೆಸಿಕೊಂಡರೆ, ನಮ್ಮ ಉದ್ಧಾರ-ಆತ್ಮೋದ್ಧಾರ-ಒಂದಲ್ಲ ಒಂದು ಬಾರಿ, ಇಂದಲ್ಲ ನಾಳೆ ಆಗಿಯೇ ಆಗುತ್ತದೆ. ಪರಮಾತ್ಮನ ಕೃಪೆಗೆ ನಾವು ಪಾತ್ರರಾಗುತ್ತೇವೆ ಎಂಬ ಭರವಸೆ ಉಂಟು. ಈ ಭರವಸೆಯನ್ನು ಜ್ಞಾನಿಗಳು ನಮಗೆ ನೀಡಿದ್ದಾರೆ. ಮಧ್ಯೆ ಒಂದು ವೇಳೆ ನಾವು ಅಪರಾಧಗಳನ್ನೇ ಮಾಡಿದರೂ ಅವುಗಳನ್ನು ಅವನು ಕ್ಷಮಿಸುತ್ತಾನೆ.

''ಸ್ಮರಿಸುವವರಪರಾಧಗಳ ತಾ । ಸ್ಮರಿಸ ಸಕಲೇಷ್ಟಪ್ರದಾಯಕ । ಮರಳಿತನಗರ್ಪಿಸಲು ಕೊಟ್ಟುದನಂತಮಡಿಮಾಡಿ ॥
ಪರಿಪರಿಯಲಿಂದುಣಿಸಿ ಸುಖ ಸಾ । ಗರದಿ ಲೋಲಾಡಿಸುವ ಮಂಗಳ । ಚರಿತ ಚಿನ್ಮಯಗಾತ್ರಲೋಕಪವಿತ್ರ ಸುಚರಿತ್ರ ॥ -- ಹರಿಕಥಾಮೃತಸಾರ.

ಇಂತಹ ಕರುಣಾಳುವಾದ ಪರಮಾತ್ಮನನ್ನು ಮೆಚ್ಚಿಸಿದರೆ-ಪರಮಾತ್ಮ ಮೆಚ್ಚಿದರೆ- ''ಯತ್ನಕೆ ಲೇಶ ಒಲಿಯುವನಲ್ಲವೋ ಅತ್ಯಂತ ಮಹಿಮ ನೀನೊಲಿಯಲತಿಸುಲಭ''- ನಮಗೆ ಆಗುವಷ್ಟು ಲಾಭ ಉಳಿದವರು ಯಾರು ಎಷ್ಟು ಮೆಚ್ಚಿದರೂ ಆಗಲಾರದು.

''ಜನಪ ಮೆಚ್ಚಿದರೀವ ಧನ ವಾ । ಹನ ವಿಭೂಷಣ ವಸನ ಭೂಮಿಯ । ತನುಮನೆಗಳಿತ್ತಾದರಿಪ್ಪಂಟೇನೋ ಲೋಕದೊಳು ॥
ಅನವರತ ನೆನೆವವರನಂತಾ । ಸನವೆ ಮೊದಲಾದಾಲಯದಲಿ । ಟ್ಟಣುಗನಂದದಲವರ ವಶನಾಗುವನು ಮಹಾಮಹಿಮ ॥ '' -- ಹರಿಕಥಾಮೃತಸಾರ.

ಮಾನವಜನ್ಮವನ್ನು -ಸಾಧನ ಶರೀರವನ್ನು-ಪ್ರಧಾನ ಮಾಡಿ ಆತ್ಮೋದ್ಧಾರ ಮಾಡಿಕೊಳ್ಳಲು ಅವಕಾಶ ಕೊಡುವವರು ಪರಮಾತ್ಮನಲ್ಲದೇ ಬೇರೆ ಯಾರಿದ್ದಾರೆ?

ಜ್ಞಾನಿಗಳ ಈ ಭರವಸೆಯನ್ನು ಆಪ್ತವಚನವೆಂದು ನಂಬಿ ಮುಂದುವರಿದರೆ ನಾವು ಗುರಿಯನ್ನು ಸಾಧಿಸುತ್ತೇವೆಂಬುದು ನಿಸ್ಸಂದೇಹವಷ್ಟೇ ಅಲ್ಲ ಅದರಿಂದ ಇಹ ಜೀವನವೂ ಸುಖಮಯವಾಗಿ, ಮನಸ್ಸು ಶಾಂತಿಯಿಂದ ತುಂಬಿರುತ್ತದೆ. ಭತ್ತದ ಗದ್ದೆಯಿಂದ ಭತ್ತವಲ್ಲದೇ ಹುಲ್ಲು ಮುಂತಾದ ಇತರ ಉಪಯುಕ್ತ ಪದಾರ್ಥಗಳೂ ತನ್ನಷ್ಟಕ್ಕೆ ತಾನೇ ಲಭ್ಯವಾಗುವಂತೆ !

ಮನೋಶಾಂತಿ ಒಂದಿದ್ದರೆ ಮತ್ತೇನು ಕೊರತೆ ? ಪ್ರಾಪಂಚಿಕ ಸಂಪತ್ತು ಎಷ್ಟಿದ್ದರೂ ಈ ಮನಸ್ಸಿನ ಶಾಂತಿ ಇಲ್ಲದಿದ್ದರೆ ಏನುತಾನೇ ಪ್ರಯೋಜನ? ಏನಿಲ್ಲದಿದ್ದರೂ ಇದೊಂದಿದ್ದರೆ ಎಲ್ಲವೂ ಇದ್ದಂತೆಯೇ ಅಲ್ಲವೇ? ಪರಮಾತ್ಮನ ಭಕ್ತಿಯಿಂದ ಬರುವ ಮನಸ್ಸಿನ ಶಾಂತಿ ಇಹಜೀವನದಲ್ಲಿ ಸಾಧಿತವಾದರೆ, ಪರವೂ ಸಿದ್ಧಿಸಿದಂತೆಯೇ. ಇಂತಹ ಜ್ಞಾನಭಕ್ತಿಗಳು ತುಂಬಿದ ಹೃದಯವನ್ನು ಬೆಳೆಸಿಕೊಳ್ಳುವುದೇ ನಮ್ಮ ಆದ್ಯಕರ್ತವ್ಯವೆಂದು ಯುವಕರು ಭಾವಿಸುವುದು ಶ್ರೇಯಸ್ಕರವಲ್ಲವೇ? ವಯಸ್ಸಾದ ಮೇಲೆ ಎಂದೂ ಈ ಪ್ರಜ್ಞೆಬರುವುದಕ್ಕಿಂತಲೂ, ಯೌವನದಲ್ಲೇ ಇದು ಬಂದರೆ ಅವನು ಧನ್ಯನಲ್ಲವೇ? ಈ ಆಸ್ತಿಕ್ಯಬುದ್ಧಿ , ಅಹಂಕಾರರಹಿತವಾದ ಮನಸ್ಸು , ಭಕ್ತಿ-ಜ್ಞಾನ ತುಂಬಿದ ರಸಮಯವಾದ ಹೃದಯಗಳನ್ನು ಬೆಳೆಸಿಕೊಳ್ಳುವುದೇ ಎಲ್ಲರ- (ವಿಶೇಷವಾಗಿ ಯುವಕರ) ಕರ್ತವ್ಯವೆಂದು ನಮ್ಮ ನಂಬಿಕೆ.

''ಸೂಜಿ ಕರದಲಿ ಪಿಡಿದು ಸಮರವ । ನಾ ಜಯಿಸುವೆನು ಎಂಬ ನರನಂ । ತೀ ಜಗತ್ತಿನೊಳುಳ್ಳ ಅಜ್ಞಾನಿಗಳು ನಿತ್ಯದಲಿ ॥
ಶ್ರೀಜಗತ್ಪತಿ ಚರಣಯುಗಳ ಸ । ರೋಜಭಕ್ತಿಜ್ಞಾನಪೂರ್ವಕ । ಪೂಜಿಸದೆ ಧರ್ಮಾರ್ಥಕಾಮನ ಬಯಸಿಬಳಲುವರು ॥- ಶ್ರೀಜಗನ್ನಾಥದಾಸರು

ವ್ಯವಹಾರಜ್ಞಾನ, ಲೋಕಸಂಗ್ರಹ, ವಿಜ್ಞಾನಾಧ್ಯಯನಗಳೆಲ್ಲಾ ಬೇಕಾದುದೇ ಆದರೂ ಕೇವಲ ಇವುಗಳೇ ವಿದ್ಯಾಭ್ಯಾಸವೆಂಬ ಭ್ರಾಂತಿಯನ್ನು ಬಿಡಬೇಕು. ಆಧ್ಯಾತ್ಮವಿದ್ಯೆಯೇ ವಿದ್ಯೆಯೆಂದೆನಿಸಿಕೊಳ್ಳುವುದು. ಯಂತ್ರವಿದ್ಯೆ ಹೆಚ್ಚಾದರೂ ಮಂತ್ರವಿದ್ಯೆ(ಆಧ್ಯಾತ್ಮ ವಿಚಾರ)ಯನ್ನು ಮರೆಯಬಾರದು. ಆಧ್ಯಾತ್ಮವಿಚಾರರಹಿತವಾದ ವಿದ್ಯೆ ''ಆಸುರೀವಿದ್ಯೆ''ಯಾಗುವುದರಲ್ಲಿ ಸಂದೇಹವಿಲ್ಲ. ಇಂದಿನ ಪ್ರಪಂಚವೇ ಇದಕ್ಕೆ ಸಾಕ್ಷಿ !

(ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾತ್ಮಕಶ್ರೀಲಕ್ಷ್ಮೀಹಯಗ್ರೀವಾತ್ಮಕ ಶ್ರೀಕೃಷ್ಣಾರ್ಪಣಮಸ್ತು )

ಶ್ರೀಕೃಷ್ಣರಾಯರಿಗೆ ನಮನಗಳು. ಶ್ರೀಮದಾಚಾರ್ಯರಿಗೆ ನಮನಗಳು. ಶ್ರೀಮಧ್ವೇಶನಿಗೆ ನಮಸ್ಕಾರಗಳು.

(ಯುವಕರ ಕರ್ತವ್ಯದ ಬಗ್ಗೆ ಪ್ರಜ್ಞೆಮೂಡಿಸಿಕೊಂಡ ನಂತರ ವೈಷ್ಣವರಾದ ನಾವು ಪ್ರಥಮತಃ ಮಾಡಬೇಕಾದುದೇನು ? )

(ಪ್ರ.ತಿ.ನೋ.)

ವೈಷ್ಣವರ ಮುಖ್ಯ ಕರ್ತವ್ಯ-------ಲೇಖಕರು ಶ್ರೀ ಎಚ್.ಸುಬ್ಬರಾಯರು. ಎಂ.ಎ. ಮೈಸೂರು.

ಶ್ರೀಗುರುಭ್ಯೋನಮಃ ಶ್ರೀಮದ್ಧನುಮದ್ಭೀಮಸುಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯನಮಃ

''ನರಸಿಂಹೋಽಖಿಲಾಜ್ಞಾನ ಮತಧ್ವಾಂತದಿವಾಕರಃ । ಜಯತ್ಯಮಿತಸಜ್ಞಾನ ಸುಖಶಕ್ತಿಪಯೋನಿಧಿಃ ॥''

ಭೂಲೋಕದಲ್ಲಿ ಆಧ್ಯಾತ್ಮದೃಷ್ಟಿಯಿಂದ ವಿಚಾರಮಾಡಿದರೆ, ಆಗರ್ಭಶ್ರೀಮಂತರೆಂದರೆ ಮಾಧ್ವರೇ ಸರಿ. ಲೌಕಿಕ ವ್ಯವಹಾರಸಂಭಾಷಣೆಯಲ್ಲಿ 'ಕೊಡಬೇಕಾದ ಹಣಕೊಟ್ಟು ವೈಷ್ಣವಧರ್ಮವನ್ನು ಉಳಿಸಿಕೋ'' ಎಂದು ಒಬ್ಬ ಮಾಧ್ವಯುವಕನಿಗೆ ನಾನು ಹೇಳಿದಾಗ, ಆತನು ''ನಾವು ಹುಟ್ಟು ವೈಷ್ಣವರು, ನೀವು ಧರ್ಮಬೋಧೆ ಮಾಡುವುದೇನು?'' ಎಂಬರ್ಥಬರುವಂತೆ ಉತ್ತರವಿತ್ತನು. ರಸಯುಕ್ತವಾದ ಆ ಮಾತಿನ ಗುಣ ಗ್ರಹಿಸಿದ ನನಗೆ ಈ ತತ್ವ ನೆನಪಿಗೆ ಬಂದು ಸಂತೋಷವಾಯಿತು. ಹುಟ್ಟುವಾಗಲೇ ಮಾಧ್ವಶಿಶುಗಳು ಜ್ಞಾನಸಂಸ್ಕಾರವಾತಾವರಣವೆಂಬ ಸುವರ್ಣಕವಚವನ್ನು ಧರಿಸಿಯೇ ಹುಟ್ಟುತ್ತಾರೆ. ಜನಿಸಿದ ಸ್ವಲ್ಪ ವರ್ಷಗಳಲ್ಲಿಯೇ ಅವರಿಗೆ 'ಶ್ರೀಮಧ್ವಾಚಾರ್ಯರು ಸರ್ವಜ್ಞರು; ಮೂವತ್ತೇಳುಗ್ರಂಥಗಳನ್ನು ತಮ್ಮ ಅನುಯಾಯಿಗಳಾದ ನಮಗಾಗಿ ರಚಿಸಿ, ಮುಕ್ತಿಗೆ ಸೋಪಾನವನ್ನು ತೋರಿಸಿ ಬದರಿಕಾಶ್ರಮಕ್ಕೆ ಪ್ರಯಾಣಮಾಡಿರುತ್ತಾರೆ; ಅವರ ಮಾರ್ಗವನ್ನು ಅನುಸರಿಸಿ ಅನೇಕರು ಪರಬ್ರಹ್ಮದರ್ಶನಮಾಡಿ ಸಾಕ್ಷಿಕೊಟ್ಟಿದ್ದಾರೆ; ಶ್ರೀವ್ಯಾಸರಾಯರು, ಶ್ರೀರಘೂತ್ತಮರು, ಶ್ರೀರಾಘವೇಂದ್ರಸ್ವಾಮಿಗಳು, ಶ್ರೀಪಾದರಾಜರು, ಶ್ರೀಬ್ರಹ್ಮಣ್ಯತೀರ್ಥರು, ಶ್ರೀವಾದಿರಾಜತೀರ್ಥರೇ ಮುಂತಾದವರು ನಿಃಸಂಶಯವಾಗಿ ಪರಮಾತ್ಮನನ್ನು ಕಂಡವರು; ಹಾಗೆಯೇ ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವಿಜಯದಾಸರು, ಶ್ರೀಭಾಗಣ್ಣದಾಸರು, ಶ್ರೀಜಗನ್ನಾಥದಾಸರು ಮುಂತಾದ ದಾಸಶ್ರೇಷ್ಠರೂ ಪರತತ್ವವನ್ನು ಸಾಕ್ಷಾತ್ಕರಿಸಿದ ಅಪರೋಕ್ಷಜ್ಞಾನಿಗಳು; ಅವರ ಮಾರ್ಗದಲ್ಲಿ ಹೋದರೆ ನಿಜತತ್ವ ತಿಳಿದು ನೆಮ್ಮದಿಯಾಗುವುದು ಸಿದ್ಧ; ಅವರು ನುಡಿದಿರುವುದೇ ನಿರ್ಣಾಯಕತತ್ತ್ವ' ಎಂದು ಹೃದಯಕ್ಕೆ ನಾಟಿದಂತೆ ಸುದೃಢನಿಶ್ಚಯವಾಗಿರುವುದು. ಗಾಳಿ ನೀರುಗಳನ್ನು ನಾವು ಸುಲಭವಾಗಿ ಸೇವಿಸುತ್ತಿರುವಂತೆ ಮಾಧ್ವಬಾಲಕರು ತಮ್ಮ ಸ್ವಜನಸಂಗದಲ್ಲಿ ತತ್ತ್ವಜ್ಞಾನಾಸವವನ್ನು ಸವಿಯುತ್ತಲೇ ಇರುವರು. ಆದ್ದರಿಂದ ಪ್ರಾಯದ ವಯಸ್ಸು ಬಂದಾಗ ತಾರುಣ್ಯ ಅನುಭವಕ್ಕೆ ಬರುವಂತೆ ಪೂರ್ವೋಕ್ತಜ್ಞಾನರಶ್ಮಿಯು ದೈವೇಚ್ಛೆಯಿಂದ ಸ್ವಕೀಯಜನರ ಸಂಗಕವಾಟದಮೂಲಕ ಹೃದಯಾಂತರಂಗವನ್ನು ಬೆಳಗಿ ವ್ಯಾಪಿಸಿ ಮಾಧ್ವಯುವಕರನ್ನು ಯಾವಾಗ ಹುರಿದುಂಬಿಸುವುದೋ ಆಗ ಅವರು, ಕೂಡಲೇ ತಮ್ಮ ಕುಲದ ಮೂಲಪುರುಷರಾದ ಸರ್ವಜ್ಞಾಚಾರ್ಯರು ತಮಗೋಸ್ಕರ ಬರೆದಿಟ್ಟು ಹೋಗಿರುವ ಆ ಮೂವತ್ತೇಳು ಗ್ರಂಥಗಳನ್ನು ಮೊದಲು ಓದಿ ನಂತರ ಇತರ ಧ್ಯೇಯಗಳನ್ನು ಸಾಧಿಸಬೇಕೆಂದು ನಿಶ್ಚಯಿಸಬೇಕು ಎಂದು ತಿಳಿಯಿತೋ ಅಂದಿನಿಂದ ಪ್ರವೃತ್ತಿ. ತನ್ನ ತಂದೆಯು 'ವಿಲ್' ಬರೆದಿಟ್ಟು ಲೋಕಾಂತರಕ್ಕೆ ಪ್ರಯಾಣಮಾಡಿದ್ದರೆ, ಪುತ್ರನು ವಕೀಲನ ಸಹಾಯದಿಂದ ಆ ವಿಲ್ ಪತ್ರವನ್ನು ಮೊದಲು ವಿಮರ್ಶಿಸಿ ನಂತರ ಇತರ ಕರ್ತವ್ಯಗಳಿಗೆ ಕೈಹಾಕುವನು. ಶ್ರೀ ಸರ್ವಜ್ಞಾಚಾರ್ಯರ ಗ್ರಂಥಗಳು ಅವರ ಶಿಷ್ಯರಿಗೆ ತತ್ತ್ವಜ್ಞಾನ ಮಾರ್ಗದ 'ವಿಲ್'ಪತ್ರಗಳಂತಿರುವುದರಿಂದ, ಮಾಧ್ವಮುಮುಕ್ಷುವು ಜ್ಞಾನಪಥದಲ್ಲಿ ಹೆಜ್ಜೆಯಿಟ್ಟು ಮುಂದೆ ಯಾವ ಒಂದು ಮರಗೈ(ಕೈಕಂಭ) ವಿಮರ್ಶೆಮಾಡುವ ಮೊದಲೇ ಸ್ವಮೂಲಪುರುಷರ ಆ ಗ್ರಂಥಗಳನ್ನು ಜ್ಞಾನಮಾರ್ಗದ ವಕೀಲನಂತಿರುವ ಗುರುಸಹಾಯದಿಂದ- ಶ್ರವಣಮಾಡಲಿಕ್ಕೇ ಬದುಕುವೆನು, ಆ ಶ್ರವಣವಾದ ಮೇಲೆಯೇ ಇತರವಿಮರ್ಶೆ ಮಾಡುವೆನು- ಎಂದು ಶಪಥಮಾಡಿ, ಆ ಕಾರ್ಯಕ್ಕಾಗಿ ತನ್ನ ದಿವಸಗಳನ್ನು ಅಂದಿನಿಂದಲೇ ಮುಡುಪಾಗಿಡಬೇಕು. ಇದು ಆತನಿಗೆ ಪ್ರಥಮಪ್ರಾಪ್ತವಾದ ಸನ್ನಿಹಿತಕಾರ್ಯ. 'ಯಃ ಪುತ್ರಃ ಪಿತರಂ ದ್ವೇಷ್ಟಿ ತಂ ವಿದ್ಯಾದನ್ಯರೇತಸಂ' ಎಂದು ಶೇಷಧರ್ಮದಲ್ಲಿ ಹೇಳಿದೆ. ಗುರುವಿನ ಅವಜ್ಞೆಯನ್ನು ಸರ್ವಥಾ ಮಾಡಬಾರದೆಂದೂ ಹೇಳಿದೆ. 'ಗುರೋರಾಜ್ಞಾಂ ನ ಲಂಘಯೇತ್' ಎಂದು ಸ್ಮೃತಿಯಿದೆ.ಆದ್ದರಿಂದ ಮಾಧ್ವಸಂಸ್ಕೃತಿಯಲ್ಲಿ ಬೆಳೆದು ಕಣ್ಣುತೆರೆದವರಿಗೆ ಇದಕ್ಕಿಂತ ಮೇಲಾದ ಧರ್ಮವಿಲ್ಲ. ಇತರ ಸಮಸ್ತಧರ್ಮವೂ ಅವರಿಗೆ ಇದಕ್ಕಿಂತ ನೀಚವಾದುದು. ವಿಳಂಬದಿಂದ ಅವರಿಂದಲೇ ಮಾಡಲ್ಪಡಬಹುದು. ಹಾಗೆ ಮಾಡದೇ ಪ್ರಥಮಪ್ರಾಪ್ತಕರ್ತವ್ಯವಾದ ತಮ್ಮ ಗುರುಗಳ ಗ್ರಂಥಶ್ರವಣವನ್ನು ಬುದ್ಧಿಮಾಂದ್ಯದಿಂದ ಮುಂದೆ ಹಾಕಿದರೆ ಅಥವಾ ಉಪೇಕ್ಷೆ ಮಾಡಿದರೆ ಅವರು ಪಿತ್ರವಜ್ಞೆಗೆ ಸದೃಶವಾದ ಮೂಲಾಚಾರ್ಯರ ಅಪಮಾನವನ್ನು ಮಾಡಿದಂತಾಗಿ ಪಾಪಿಷ್ಠರಾಗುವರು. ಏಕೆಂದರೆ ಶ್ರೀಮಧ್ವಾಚಾರ್ಯರು ಜ್ಞಾನಮಾರ್ಗದ ತಂದೆಗಳು ಮತ್ತು ಈ ಗುರುದ್ರೋಹವು ಅವರ ಇತರ ಸಮಸ್ತ ಕಾರ್ಯಗಳಲ್ಲೂ ಕ್ಲೇಶ ಪರಿಭವಗಳಿಗೆ ಕಾರಣವಾಗಿ ಅಂತ್ಯದಲ್ಲಿ ಬಹುದುಃಖದಾಯಕವಾಗುತ್ತದೆ.

ಕಿಂಚ ಯಾವ ಇತರಧರ್ಮಗಳ ಅನುಷ್ಠಾನಕ್ಕೂ ಮಾಧ್ವಕುಲದಲ್ಲಿಯೇ ಹುಟ್ಟಬೇಕೆಂಬ ನಿಯಮವಿಲ್ಲ. ಯಾವ ಜಾತಿಯಲ್ಲಿ ಹುಟ್ಟಿದರೂ ದಾನ ಮಾಡಬಹುದು-ಯಾತ್ರೆಮಾಡಬಹುದು- ದೇಶಸೇವೆ ಮಾಡಬಹುದು. ವೇದಾಧ್ಯಯನ-ಯಜ್ಞಾದಿಗಳನ್ನು ಮಾಡಿ ವೇದಾಂಗಗಳನ್ನು ಓದುವುದಕ್ಕಾದರೋ ಸ್ಮಾರ್ತಬ್ರಾಹ್ಮಣನಾಗಿ ಹುಟ್ಟಿದರೆ ಸಾಕು. ಸರ್ವಜ್ಞಾಚಾರ್ಯರ ನಿರ್ಣಯಗ್ರಂಥಗಳನ್ನು ಓದಲು ಮಾತ್ರ ದೀಕ್ಷಾಪ್ರಚುರವಾದ ವಿಶಿಷ್ಟಮಾಧ್ವಬ್ರಾಹ್ಮಣಕುಲದಲ್ಲಿ ಉತ್ಪತ್ತಿಬೇಕು. ಅಥವಾ ವಿಮರ್ಶಾಪೂರ್ವಕವಾದ ವಾಯುಜೀವೋತ್ತಮತ್ವವನ್ನು ನಿಶ್ಚಯಿಸಿದ ದೀಕ್ಷಾಯುಕ್ತ ಬ್ರಾಹ್ಮಣ್ಯಬೇಕು. ಋಗ್ವೇದಿ ವಟುವು ಯಜುಃಶಾಖೋಕ್ತವಿಧಾನದಿಂದ ಉಪಾಕರ್ಮವನ್ನು ಮಾಡಿಕೊಳ್ಳಕೂಡದು. ಹಾಗೆಯೇ ಉತ್ತಮ ಮಾಧ್ವ ಬ್ರಾಹ್ಮಣನು ಸ್ವಮೂಲಗುರುಗಳ ಗ್ರಂಥವನ್ನು ಓದುವುದಕ್ಕೆ ಇತರಜನಾಂಗಕ್ಕೆ ಇಲ್ಲದ ಅಸಾಧಾರಣಗುಣಯುಕ್ತನಾಗಿರುವುದರಿಂದ ಮತ್ತು ಪ್ರಯತ್ನ ವಿಲ್ಲದೇ ವಾಯುದೇವರ ಜಗದ್ಗುರುತ್ವವನ್ನು ನಿಸ್ಸಂಶಯವಾಗಿ ತಿಳಿದಿರುವುದರಿಂದ ಆ ಕಾರ್ಯವನ್ನು ಮಾಡದೇ ಬೇರಾವುದನ್ನು ಮಾಡಿದರೂ ನೀಚ ಕಾರ್ಯವನ್ನು ಮಾಡಿದಂತೆಯೇ ಸರಿ. ಅಧ್ಯಯನವನ್ನು ಮಾಡಿ ಸ್ವರ್ಗಪಡೆಯದೇ ಅಂಗಡಿಯಿಟ್ಟು ದುಡ್ಡುಸಂಪಾದಿಸಿದರೆ ಬ್ರಾಹ್ಮಣನ ಬ್ರಾಹ್ಮಣ್ಯಕ್ಕೆ ಬಂದ ಲಾಭವೇನು?

ಇದೂ ಅಲ್ಲದೇ ಅನೇಕ ಮತಪ್ರವರ್ತಕರ ಗ್ರಂಥಪಾಠಕ್ಕೆ ಜಾತಿನಿಯಮವಿಲ್ಲ- ಆಚಾರನಿಯಮವಿಲ್ಲ- ಕಾಲವ್ರತನಿಯಮವಿಲ್ಲ. ಬೇರೆ ಕೆಲವು ಮತಗ್ರಂಥಗಳನ್ನು ಬ್ರಾಹ್ಮಣ್ಯಮಾತ್ರವಿದ್ದರೆ ಅಭ್ಯಾಸಮಾಡಬಹುದು. ಸರ್ವಜ್ಞಾಚಾರ್ಯರ ಗುರುತ್ವದಲ್ಲಿ ವಿಮರ್ಶೆಮಾಡಿ ವಿಶ್ವಾಸಪೂರ್ವಕವಾದ ಸುದೃಢನಿರ್ಣಯವೇ ಬೇಕೆಂಬ ನಿಯಮವನ್ನು ಯಾರೂ ಅಪೇಕ್ಷಿಸಿಲ್ಲ. ಸರ್ವಮೂಲಗ್ರಂಥಗಳ ವ್ಯಾಸಂಗಕ್ಕೆ ಮಾತ್ರ -ಋಜುಗ್ರಣಾಗ್ರಣಿಗಳಾದ ವಾಯುದೇವರೇ ಬ್ರಹ್ಮರು- ಅವರೊಬ್ಬರೇ ಉಪದೇಶಮಾಡಲು ಪೂರ್ಣಸಮರ್ಥರಾದ ಗುರುಗಳು-ಅವರಲ್ಲಿ ಸುಳ್ಳು, ವಂಚನೆ, ವಿಪರೀತಜ್ಞಾನವಿಲ್ಲ ಅವರಿಗೆ ಸಮಾನರಾದ ಅಥವಾ ಹೆಚ್ಚಿನ ಗುರುಗಳು ಜಗತ್ತಿನಲ್ಲಿಲ್ಲ-ಎಂಬ ಪರೀಕ್ಷಿತಸುದೃಢನಿಶ್ಚಯವೆಂಬ ದೀಕ್ಷೆ ಬೇಕು.(**) ಇಂಥ ಸುದೃಢನಿಶ್ಚಯವು

★★ ಎಲ್ಲ ಮತಸ್ಥರೂ ತಮ್ಮ ತಮ್ಮ ಮತಪ್ರವರ್ತಕರನ್ನು ಸರ್ವಸಿದ್ಧಿಯುಕ್ತ ಸರ್ವಜ್ಞಚೂಡಾಮಣಿಗಳೆಂದೇ ಹೇಳುವರೆಂದು ಹೇಳುವಹಾಗಿಲ್ಲ.

ಮಾಧ್ವಕುಮಾರರಿಗೆ ತಮ್ಮ ಸಹಜ ಸಂಸ್ಕೃತಿಯ ವಾತಾವರಣದಿಂದ ಬಂದು ಹೋಗಿರುತ್ತದೆ. ಇತರರಿಗೆ ಅದು ಬರಬೇಕಾದರೆ ಅನೇಕವರ್ಷಗಳ ನಿರಂತರ ವಿಮರ್ಶೆ ಬೇಕು. ಬಹು ಮತಪ್ರವರ್ತಕರ ಚಾರಿತ್ರಪರೀಕ್ಷೆ ಬೇಕು. ಅಂಥ ವಿಮರ್ಶೆಗೂ ಪ್ರಬಲಸಹಕಾರಸಾಮಗ್ರಿಗಳು ಅನೇಕವಾಗಿ ಆಗಬೇಕು. ಎಷ್ಟೋ ಜನರಿಗೆ ಆ ದಿಕ್ಕು ಕೂಡಾ ಕಾಣಿಸುವುದಿಲ್ಲ.

ಆದ್ದರಿಂದ ಪ್ರತಿಯೊಬ್ಬ ಮಾಧ್ವನೂ ತನಗೆ ತನ್ನ ಮೂಲಾಚಾರ್ಯರ ಮಹಿಮೆಯು ಜ್ಞಾನಚಾರಿತ್ರಶ್ರವಣಾದಿಗಳಿಂದಲೂ ಮತ್ತು ಸ್ವಕೀಯ ಭಕ್ತಜನರ ಸಂಗಪ್ರಭಾವದಿಂದಲೂ ತಿಳಿದು ಬಂದೊಡನೇ ಅವರು ಬರೆದಿಟ್ಟ ಗ್ರಂಥಗಳನ್ನು ಗುರುಮುಖದಿಂದ ಶ್ರವಣಮಾಡಿಯೇ ಇತರಕಾರ್ಯದಲ್ಲಿ ಆಸಕ್ತನಾಗುತ್ತೇನೆಂದು ದೃಢಪ್ರತಿಜ್ಞೆಮಾಡಿ, ಬ್ರಹ್ಮಚಾರಿಯಾಗಿದ್ದರೆ ಸ್ವಯೋಗ್ಯಗುರುಗಳನ್ನು ಮನೆಗೆ ಕರೆಯಿಸಿಕೊಂಡು ಶಾಸ್ತ್ರೋಕ್ತಕ್ರಮದಲ್ಲಿ ವ್ಯಾಸಂಗಮಾಡಬೇಕು; ಅಥವಾ ಪರಸ್ಪರ ಯೋಗವಾಗಿ ಪಾಠವಾಗುವಂತೆ ಅನುಕೂಲಗಳನ್ನು ಏರ್ಪಡಿಸಿಕೊಂಡು ವಿಧ್ಯುಕ್ತರೀತಿಯಲ್ಲಿ ಶ್ರವಣವನ್ನು ಆರಂಭಿಸಬೇಕು. ಇಷ್ಟು, ಗ್ರಂಥವ್ಯಾಸಂಗ ಮಾಡದ ಅಜ್ಞಮಾಧ್ವರ ಪ್ರಥಮಕರ್ತವ್ಯ ಧರ್ಮ.

-2-

ಮಧ್ವಶಾಸ್ತ್ರಾಮೃತ ಪಾನಮಾಡಿದ ಪಂಡಿತವೈಷ್ಣವರ ಕರ್ತವ್ಯವು ಇನ್ನೂ ಗುರುತರವಾಗಿದೆ. ಈ ವಿಬುಧಜನರು ಮಾಧ್ವೇತರ ಸರ್ವಮತ-ಗಳಿಗೂ ಸುಳ್ಳೆಂದು ಇತರರಿಗೆ ನಿಧಾನವಾಗಿ ಕೇಳಿದರೆ ತಿಳಿಸಿಕೊಡುವಷ್ಟು ಖಚಿತವಾಗಿ ಬಲ್ಲರು. ಆ ಮತಗಳೆಲ್ಲವೂ ಬ್ರಹ್ಮನ ಪೂರ್ಣತೆಗೋ, ಜೀವರ ಸ್ವಾಭಾವಿಕ ತಾರತಮ್ಯಕ್ಕೋ, ಜಗತ್ತಿನ ಸತ್ಯತ್ವಕ್ಕೋ ಧಕ್ಕೆ ತರುತ್ತವೆಂದು ತಿಳಿದಿದ್ದಾರೆ. ಹೇಸಿಗೆ ಸಂಸಾರದಲ್ಲಿ ಬಿದ್ದಿರುವ ಈ ಮದಡುಮಾನವನಿಗೆ ಪ್ರಯತ್ನದಿಂದ ಬ್ರಹ್ಮತುಲ್ಯತೆ ಬರುತ್ತದೆಂದು ಹೇಳುವುದು ಹಾಸ್ಯಾಸ್ಪದವೆಂದು ತಿಳಿದಿದ್ದಾರೆ. ಶ್ರೀಹರಿಯೇ ಸರ್ವೋತ್ತಮನು, ವಾಯುದೇವರೇ ಜೀವೋತ್ತಮ ಋಜುಗುರುಗಳು, ಪಂಚಭೇದತಾರತಮ್ಯಗಳು ನಿತ್ಯ ಸತ್ಯ, ಪ್ರಮಿತಸರ್ವಜಗತ್ತೂ ಸತ್ಯ, ಈ ಸರ್ವತತ್ವಗಳೂ ಧ್ಯಾನದಿಂದ ಸಾಕ್ಷಾತ್ಕಾರಾರ್ಹಗಳು, ಹಾಗೆ ಸಾಕ್ಷಾತ್ಕಾರ ಹೊಂದಿದ ಋಷಿಗಳು ಹಿಂದೂ ಅನೇಕರಾಗಿ ಹೋಗಿರುವರು, ಮುಂದೂ ಅನೇಕರು ಬರಲಿರುವರು; ಸರ್ವಜ್ಞರು ತೋರಿಸಿರುವ ರೀತಿಯಲ್ಲಿ ಶುಭಸಾಧನೆ ಮಾಡಿದರೆ ಸ್ವರ್ಗಮೋಕ್ಷಗಳಾಗುತ್ತೆ ; ಅಶುಭವ್ಯಾಪಾರಗಳಿಂದ ನರಕ ತಮಸ್ಸುಗಳು ಸಿದ್ಧ; ಅನ್ಯಥಾಜ್ಞಾನದ ದ್ವೇಷಪೂರ್ವಕವಾದ ಯಥಾರ್ಥಜ್ಞಾನ ಒಂದೇ ಮುಕ್ತಿಗೆ ನಿಜಮಾರ್ಗ; ಆದ್ದರಿಂದ ಯಾವಾಗಲೂ ಪ್ರಮಾಣಗಳಿಂದ ಪ್ರಮೇಯ ಸಿದ್ಧಿಯು ಸ್ಪಷ್ಟವಾಗುವವರೆಗೂ ಪುನಃ ಪುನಃ ಜಿಜ್ಞಾಸೆ ಮಾಡಲೇಬೇಕು; ವಿಚಾರಭೀರುವಾದ ಗುರುವನ್ನು ಅನುಸರಿಸಬಾರದು; ಜ್ಞಾನವಿಶಿಷ್ಟವೈರಾಗ್ಯ ಪೂರ್ವಕವಾದ ಭಕ್ತಿಯೇ ಸ್ವಾಮಿಪ್ರೀತಿಗೆ ಉಪಾಯ; ಶ್ರೀಹರಿಯಲ್ಲಿ ಅಂತಹ ಭಕ್ತಿಮಾಡಲು ಕಾರಣಗಳು ಅನಂತವಾಗಿವೆ, ಎಂದು ಮುಂತಾಗಿ ನಿಃಶಂಕವಾಗಿ ತಿಳಿದಿರುತ್ತಾರೆ. ಗೃಹ, ಕೀರ್ತಿ, ಸ್ತ್ರೀ, ಧನಾದಿ ಸಕಲ ಸುಖಭೋಗಗಳೂ ಕುಪಿತಸರ್ಪದ ಹೆಡೆಯ ನೆರಳಿನಲ್ಲಿರುವ ಗಂಟಿನಂತೆ ಮುಮುಕ್ಷುವಿಗೆ ಅಪಾಯಕರ ಪ್ರಲೋಭಗಳೆಂದು ತಿಳಿದಿದ್ದಾರೆ. ತಮ್ಮ ಒಂದೊಂದು ಕಾರ್ಯಗಳೂ ಜ್ಞಾನೇಚ್ಛೆಗಳೂ, ಸುಖದುಃಖಾದಿಗಳೂ ಹರಿಪ್ರೇರಿತವೆಂದು ತಿಳಿದಿದ್ದಾರೆ. ತಾವು ಛಾಯೆಯಂತೆ ಭಗವದಧೀನವೆಂದೂ, ಹರಿವಿಶಿಷ್ಟವಾಗಿ ತಾವು ಮಾಡುವ ಮಹತ್ಕಾರ್ಯಗಳೂ ಸಹ ದೊಡ್ಡವರ ಕರ್ಮಗಳಿಗೆ ಹೋಲಿಸಿದರೆ ಅತ್ಯಲ್ಪವೆಂದೂ, ದೇವತೆಗಳ ಕರ್ಮಕ್ಕೆ ಹೋಲಿಸಿದರೆ ಅತ್ಯಂತಹೀನವೆಂದೂ ತಿಳಿದಿರುತ್ತಾರೆ. ಸದ್ಗುಣವು ತಾರತಮ್ಯೇನ ಪ್ರೀತಿಯೋಗ್ಯವು-ದ್ವೇಷವು ತಾರತಮ್ಯೇನ ದ್ವೇಷಯೋಗ್ಯವು-ಮದ ಅಹಂಕಾರ ಮಿಥ್ಯಾಜ್ಞಾನಾದಿಗಳಿಂದ ಹೊಂದಿದ ಸುಖವು ಮದ್ಯದ ಸುಖದಂತೆ ತಾಮಸವು- ತಪಸ್ಸು , ಸಂತತಶಾಸ್ತ್ರಾಲೋಚನೆಗಳಿಂದಾಗುವ ದುಃಖವು ಕೂಡಾ ಸಾತ್ವಿಕವು, ಎಂದು ಮುಂತಾಗಿ ನಿಶ್ಚಯಿಸಿದ್ದಾರೆ. ವಿಷಯಸುಖವನ್ನು ಬಯಸಿ ವಿಷ್ಣುಧ್ಯಾನಮಾಡಿದರೆ ಮೋಕ್ಷವು ದೂರವಾಗುವುದೆಂದೂ ತಿಳಿದಿರುತ್ತಾರೆ. ಈ ಮತವೊಂದೇ ಪ್ರಾಮಾಣಿಕವು, ಇದರ ಬಲದಿಂದ, ಮನಸ್ಸುಮಾಡಿದರೆ ಏನನ್ನು ಬೇಕಾದರೂ-ಯೋಗ್ಯತೆಯೊಂದಿದ್ದರೆ- ಸಾಧಿಸಬಹುದೆಂದೂ ತಿಳಿದಿರುತ್ತಾರೆ. ಹನುಮ, ಭೀಮ, ಮಧ್ವಾದಿ ಸಜ್ಜನರ ನಿದರ್ಶನಗಳನ್ನು ಕೇಳಿ ಕೇಳಿ ಮನಗಂಡಿದ್ದಾರೆ. ಶ್ರೀಹರಿಯೇ ಪರಮಾಭೀಷ್ಟಪ್ರದದೇವನು, ಮುಖ್ಯಪಿತೃವು, ಮುಖ್ಯಗುರುವು, ನಿತ್ಯನಿರುಪಾಧಿಕಸ್ವಾಮಿಯಾದ ಪ್ರಭುವು, ಸಾರ್ವಕಾಲಿಕ ಸುಹೃತ್ತಾದ ಮಿತ್ರನೆಂದು ಅವರಿಗೆ ಚೆನ್ನಾಗಿ ಗೊತ್ತು. ಈ ವಿಧಜ್ಞಾನವುಳ್ಳ ಈ ಪಂಡಿತರಿಗೆ, ಶ್ರೀದೇವರ ದೇಹವೆಲ್ಲಾ ಹೇಗೆ ಸರ್ವಾಂಗವೂ ಆನಂದಪೂರ್ಣವೋ ಹಾಗೆಯೇ, ಮೈಯಲ್ಲಾ ಭಕ್ತಿಪೂರ್ಣವಾಗಬೇಕು. ಇವರು, ನಿತ್ಯವೂ ನಿಯಮಗಳಿಂದ-ಅಳಿಲು ಭಕ್ತಿ ಮಳಲು ಸೇವೆ ಎಂಬಂತೆ- ಯಥಾಶಕ್ತಿ (ದೇವರ ಯೋಗ್ಯತೆಗೆ ಸರಿಯಾಗಿಯಾರು ತಾನೇ ಮಾಡಿಯಾರು?) ಆತನನ್ನು ಆರಾಧಿಸುತ್ತಲೇ ಇರಬೇಕು, ಮತ್ತು ಆತನ ಸಂಬಂಧಿಗಳನ್ನು ಆತನ ಸಂಬಂಧಿಗಳೆಂಬ ನಿಮಿತ್ತದಿಂದಲೇ ಪ್ರೀತಿಯಿಂದ ಸೇವಿಸುತ್ತಿರಬೇಕು. ಶ್ರವಣಾದಿಗಳನ್ನು ಅವಕಾಶವಿದ್ದರೆ, ಸ್ವಲ್ಪವೂ ಬಿಡಬಾರದು. ಇದೇ ಪಂಡಿತಮಾಧ್ವರ ಮುಖ್ಯಕರ್ತವ್ಯ.

ಹೀಗಿದ್ದರೂ ಇವರಲ್ಲಿ ಅನೇಕರು, ಅಹಂಕಾರ ವಿಷಯಾಸಕ್ತಿ ಹೊಟ್ಟೆಕಿಚ್ಚುಗಳನ್ನು ನಿರ್ಮೂಲಮಾಡಿ ಬಿಡಲಾರದೇ ಹೀನಸ್ಥಿತಿಯಲ್ಲಿರುವರು. ಉದಾಹರಣೆಗೆ ಸ್ವಲ್ಪಮಾತ್ರ ನನ್ನ ಅನುಭವವನ್ನು ಹೇಳಿಕೊಂಡರೂ ನನಗೇ ನಾಚಿಕೆಯಾಗುತ್ತೆ . +++

---

(**,ಹಿಂದಿನ ಪುಟದಿಂದ) ಯಾವ ಜನಾಂಗವೂ ತಮ್ಮ ಮೂಲಗುರುವು-ಋಜುಯೋಗಿಯು, ಅಜ್ಞಾನದಿಂದ ಸುಳ್ಳನ್ನು ಒಂದು ದಿನವೂ ಆಡದವನು. ನಿತ್ಯಾತಿರೋಹಿತ ವಿಮಲವಿಜ್ಞಾನಿಯು, ಜಿತಮೃತ್ಯುಸಿದ್ಧನು- ಎಂದು ಹೇಳಿಕೊಂಡೂ ಇಲ್ಲ. ಬುದ್ಧನು ಬಾಲ್ಯದಲ್ಲಿ ಅಜ್ಞಾನಿಯಾಗಿ-ದ್ದನೆಂದೂ ಅಂತ್ಯದಲ್ಲಿ ಹಂದಿಮಾಂಸ ಜೀರ್ಣವಾಗದೇ ಕಷ್ಟದಿಂದ ಪ್ರಾಣಬಿಟ್ಟನೆಂದೂ ಬೌದ್ಧರೇ ಹೇಳುತ್ತಾರೆ. ಕ್ರಿಸ್ತನು ಬಲಾತ್ಕಾರದಿಂದ ಗಲ್ಲಿಗೇರಿಸಲ್ಪಟ್ಟ ನೋವಿನಿಂದ ಮೃತನಾಗಬೇಕಾಯಿತೆಂದೂ, ಮಹಮ್ಮದನು ಭೀತಿಯಿಂದ ಊರಿಂದೂರಿಗೆ ಓಡಬೇಕಾಯಿತೆಂದೂ, ಶಂಕರರಾಮಾನುಜಾದಿಗಳು ಕಷ್ಟದಿಂದ ಅಭ್ಯಾಸಮಾಡಿ ವಿದ್ಯೆಕಲಿಯಬೇಕಾಯಿತೆಂದೂ ಮತ್ತು ಭೀತಿವ್ಯಾಧಿಗಳಿಗೆ ವಶರಾದರೆಂದೂ ಆಯಾಯ ಮತಸ್ಥರ ಒಪ್ಪಿಗೆಯೇ ಇದೆ. ಮಧ್ವಾಚಾರ್ಯರು ನಿದ್ರಾಹೀನಧ್ಯಾನಶೀಲರೂ, ನಿತ್ಯಾಪ್ರತಿಹತಯೋಗಸಿದ್ಧಸರ್ವಜ್ಞರು, ವಜ್ರಶರೀರರಾದ, ಸುಳ್ಳಾಡದ ಸಂತತಋಜುಗಳೆಂದೂ, ಪ್ರತಿಯೊಬ್ಬ ಮಾಧ್ವನಿಗೂ ಬಾಲ್ಯದಲ್ಲಿಯೇ ತಿಳಿದು ಹೋಗಿದೆ. ‘ಅಥವಾ ಯೋಗೀನಾಮೇವ ಕುಲೇ ಭವತಿ ಧೀಮತಾಂ । ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಂ ।’ ಎಂದು ಭಗವದ್ವಚನವಿದೆ. ಧೀಮಂತಯೋಗಿಗಳೆಂದರೆ ಮಾಧ್ವ ಬ್ರಾಹ್ಮಣರು. ಅವರ ಜ್ಞಾನವು ಯಥಾರ್ಥವೆಂಬಲ್ಲಿ ಅವರ ಕುಲದವರಿಗಾಗಿರುವ ಅಪರೋಕ್ಷಾನುಭವವೇ ಸಾಕ್ಷಿ.

+++) ತತ್ವನಿರ್ಣಯಗಳನ್ನು ತಿಳಿದವರೆಲ್ಲರೂ ಸನ್ಮಾರ್ಗದಲ್ಲಿರುವರೆಂಬ ನಿಯಮವಿಲ್ಲ. ಸುಧಾದಿಗಳನ್ನು ಓದಿದ ಪಂಡಿತರೂ ಅವಿವೇಕ ಮಾರ್ಗವನ್ನು ಏಕೆ ಹಿಡಿಯುವರೆಂದು ಶಂಕಿಸಕೂಡದು. 4+4=8 ಎಂದು ತಿಳಿದವರೆಲ್ಲರೂ ಮೊಸರಿನವನಿಗೆ ಕೊಡಬೇಕಾದ 8 ರೂಪಾಯಿ’

ನನ್ನ ಮನೆಯಲ್ಲಿಯೇ ಮೃದುವಾದ ಉನ್ನತಾಸನದಮೇಲೆ ಕುಳಿತು, ನನ್ನನ್ನು ನೋಡಲು ಬಂದ ವೃದ್ಧರನ್ನು ಬನ್ನಿ ಎಂದು ಕುಳಿತುಕೊಂಡೇ ಕೈಬೆರಳು ಸಂಜ್ಞೆಯಿಂದ ಸಣ್ಣಚಾಪೆಯಮೇಲೆ ಕೂಡಲು ಅಪ್ಪಣೆಮಾಡಿದ್ದೇನೆ. ಬಂದವರು ಅಧಮರೆಂಬಲ್ಲಿ ಯಾವ ಪ್ರಮಾಣವೂ ಇಲ್ಲದೇ ವಯೋವೃದ್ಧರೆಂಬುದನ್ನೂ ಲೆಕ್ಕಿಸದೇ ವರ್ತಿಸಿದ್ದೇನೆ. ಅನ್ಯರೊಬ್ಬರ ವಿಷಯದಲ್ಲಿ ರಾಮಶಬ್ದದಲ್ಲಿ 'ರಮು' ಧಾತುವಿಗೆ 'ಘಞ್'ಪ್ರತ್ಯಯ ಆಗಿದೆ ಎಂದು ಇವರಿಗೆ ಗೊತ್ತೇ? ಎಂದು ಮುಂತಾಗಿ ನನ್ನ ಮನಸ್ಸು ಕೇಳಿದೆ. ಕೇವಲ ಕನ್ನಡ ಪದದ ವಿದ್ವಾಂಸರು ನನ್ನ ಮನಸ್ಸಿಗೆ ಏನೂ ಪ್ರಯೋಜನವಿಲ್ಲ-ದವರು. ಕಿರುನಗೆಯಿಂದ ಉತ್ತಮರನ್ನು ಆದರಿಸುವುದು; ಅವರೇನಾದರೂ ಹೇಳಿದರೆ ಅವರಿಗೆ ಸರ್ಟಿಫಿಕೇಟ್ ಕೊಟ್ಟಂತೆ 'ಸರಿ' ಎಂದು ಹೇಳುವುದು; ಬೀದಿಯಲ್ಲಿ ಹೋಗುವಾಗ ಪರಿಚಿತರ ಮುಖವನ್ನು ಕಂಡರೆ ಅವರ ನಮಸ್ಕಾರಕ್ಕಾಗಿ ಅವರನ್ನು ದುರುದುರನೆ ನೋಡುವುದು, ಅವರು ಸುಮ್ಮನೆ ಹೋದರೆ ಅವರನ್ನು ಮನಸ್ಸಿನಲ್ಲಿ ಶಪಿಸುವುದು; ದೊಡ್ಡವರ ದೋಷವನ್ನು ತೋರಿಸಿ ಅವರ ಮಹತ್ತ್ವವನ್ನು ಇಳಿಸುವುದು; ನನ್ನ ಗುಣವನ್ನು ವಿಸ್ತರಿಸಿ ನನ್ನ ಸ್ವರೂಪವನ್ನು ಏರಿಸಿಕೊಳ್ಳುವುದು ಇತ್ಯಾದಿ ವರ್ತನೆಗಳು ಬೆಳೆದಿವೆ. ಮನೆಯಲ್ಲಾಗಲೀ, ಶತ್ರುವಿಷಯದಲ್ಲಾಗಲೀ, ಮಿತ್ರವಿಷಯದಲ್ಲಾಗಲೀ ನನ್ನ ಮಾತಿನಲ್ಲಿ ಯಾವ ಸಿದ್ಧಿಯೂ ಎಂದೂ ಕಂಡಿಲ್ಲ. ಹೀಗಿದ್ದರೂ ನನ್ನ ಉಪದೇಶಪಡೆದ ಜನರೆಲ್ಲರೂ ಬ್ರಹ್ಮಲೋಕಕ್ಕೆ ತಡವಿಲ್ಲದೇ ಹೋಗಿಬಿಡುತ್ತಾ-ರೆಂದು ನನ್ನ ಮನಸ್ಸು ಭಾವಿಸುತ್ತದೆ. ಪ್ರತಿನಿತ್ಯವೂ ನೂರಾರು ಜನರು ಮನೆಗೆ ಬಂದು ನನ್ನಿಂದ ದೇವರ ತತ್ತ್ವಗಳನ್ನು ಏಕೆ ತಿಳಿಯುವುದಿಲ್ಲವೆಂದು ನನ್ನ ಮನಸ್ಸು ಕೇಳುತ್ತದೆ. <u>ಇಂಥ ಮನಸ್ಸಿನ ಅವಸ್ಥೆಯಲ್ಲಿದ್ದಾಗಲೇ</u> ನಾನು ಮೈಸೂರಿನ ಪಂಡಿತರತ್ನಂ ವಾಸುದೇವಾಚಾರ್ಯರ, ಉಪನಿಷತ್ತುಗಳಷ್ಟೆ ಪವಿತ್ರವಾದ ಪ್ರಮಾಣತಮಶಾಸ್ತ್ರವೆಂಬ ವಾದವನ್ನು ಖಂಡಿಸಿ, ಯುಕ್ತಿಪೂರ್ವಕವಾಗಿ ಯಥಾರ್ಥಬ್ರಹ್ಮಜ್ಞಾನವನ್ನು ಹುಟ್ಟಿಸುವ ಸೂತ್ರಗಳೇ ಪ್ರಮಾಣತಮಶಾಸ್ತ್ರವೆಂಬ ಕೊಯಮತ್ತೂರಿನ ವಿದ್ವಾನ್ ಸುಬ್ಬಣ್ಣಾಚಾರ್ಯರ ವಾದವನ್ನೂ ಖಂಡಿಸಿ, ತಾತ್ಪರ್ಯಜ್ಞಾನವಾಗದ ಉಪನಿಷತ್ತುಗಳಾಗಲೀ, ತಾತ್ಪರ್ಯಜ್ಞಾನವಾಗದ ಬ್ರಹ್ಮಸೂತ್ರಗಳಾಗಲೀ, ಪ್ರಮಾಣಗಳಲ್ಲವೆಂದೂ, ಸಯುಕ್ತಿಕವಾಗಿ ಯಥಾರ್ಥಜ್ಞಾನವನ್ನು ಹುಟ್ಟಿಸುವ ಟೀಕಾಟಿಪ್ಪಣೀಸಹಿತ ಸಮಗ್ರಮಧ್ವಶಾಸ್ತ್ರವೇ ಪ್ರಮಾಣತಮವೆಂದೂ ಅಪರೋಕ್ಷಜ್ಞಾನಜನಕವೆಂದೂ ಸಿದ್ಧಾಂತಮಾಡಿ, ಇಂದ್ರಾದಿಗಳು ತಲೆತೂಗುವಂತೆ ಸ್ಥಾಪನೆ ಮಾಡಿ ಲೇಖನವನ್ನು ಬರೆದಿಟ್ಟಿದ್ದೇನೆ. ಬೇಕಾದವರು ಬಂದು ಕೇಳಿಕೊಂಡು ಹೋಗಲಿ ಎಂದು ಪ್ರಿಂಟು ಮಾಡಿಸದೇ ಇಟ್ಟಿದ್ದೇನೆ- ಅಹಂಕಾರ ಇಂತಹುದು. ಮಾಧ್ವಪಂಡಿತರಿಗೆ ಇರಕೂಡದು. ಅಹಂಕಾರಿಯ ಸ್ವರೂಪವು ಗೆದ್ದಲು ಹಿಡಿದ ಪುಸ್ತಕದಂತೆಯೇ ಸರಿ.

ಇನ್ನು ವಿಷಯಾಸಕ್ತಿಯ ವೈಖರಿಯನ್ನು ಏನು ಹೇಳಲಿ. ಕಾಲೇಜಿಗೆ ಹೋಗುತ್ತಿರುವಾಗಲೇ ಸುಂದರಿಸ್ತ್ರೀಯನ್ನು ಕಂಡು, ನನ್ನ ಮನಸ್ಸು ಅವಳನ್ನು ಕರೆದುಕೊಂಡು ಬೊಂಬಾಯಿಗೆ ಹೋಗಿ ಬಂದಿದೆ. ಧ್ಯಾನಶೀಲನಾಗಿರುವಾಗಲೇ, 'ಬ್ರಹ್ಮ ನಿರ್ಗುಣ, ಅಪೂರ್ಣ, ಜಗದಾತ್ಮನಾ ಪರಿಣತ, ಜಗತ್ತು ಮಿಥ್ಯಾ,ವೇದಾದಿಗಳು ಕವಿಕಲ್ಪಿತ ಅಲಂಕಾರವಾಣಿಗಳು ಎಂದು ಮುಂತಾಗಿ ಉಪಾಸನೆ ಮಾಡಿ ಈ ದೇಹವು ಕೆಟ್ಟುಹೋಗಿದೆ, ಇದನ್ನು ಬಿಡುವುದೇ ಉಚಿತ' ಎಂದೂ ಚಿಂತಿಸುತ್ತಿರುವಂತೆಯೇ, ಮನಸ್ಸು ವಾಸನಾ ಬಲದಿಂದ ಅನ್ಯಮಾರ್ಗಕ್ಕೆ ಎಳೆದು, ಈ ದೇಹವನ್ನು ಬಿಡಿಸಿ, ಸುಪ್ರೀಂಕೋರ್ಟಿನ ಪ್ರಸಿದ್ಧ ಅಡ್ವೋಕೇಟನನ್ನಾಗಿ ಮಾಡಿ, ನನ್ನ ಗುಮಾಸ್ತೆಯು ಪಾರ್ಶ್ವವಾಯುವಿನಿಂದ ನಿರ್ವೀರ್ಯನಾಗಲು ಆತನ ಸುಂದರ ಹೆಂಡತಿಯನ್ನು ಕೂಡಿದ ಭೋಗವನ್ನು ತಂದುಕೊಟ್ಟಿತು. ಅಷ್ಟರಲ್ಲಿ ನನ್ನ ಮಗಳು 'ಸ್ನಾನಕ್ಕೇಳಪ್ಪ! ಇವತ್ತು ದೇವರಪೂಜೆ ಮಾಡುವುದಿಲ್ಲವೇನು?' ಎಂದು ಕೇಳಿದಳು. ಎಚ್ಚೆತ್ತ ನಾನು 'ಧ್ಯಾನಮುಗಿಯಿತು. ಕರ್ಮಸಂಕೋಚ ಮಾಡಲೇಬೇಕು' ಎಂದು ಹೇಳುತ್ತಾ ಎದ್ದೆನು. ಹೀಗೆ ಅನೇಕರೀತಿ ವಿಷಯಾಸಕ್ತಿ ನನ್ನನ್ನು ಬಾಧಿಸುತ್ತದೆ. ಪ್ರಾಯಃ ಸರ್ವಾನುಭವಸಿದ್ಧವಾದ ವಿಷಯಾಸಕ್ತಿಯ ದುಷ್ಟಪ್ರಭಾವವನ್ನು ಬೆಳೆಸಿ ಬರೆಯುವುದು ಅನವಶ್ಯಕ.

ಅಧಿಕರಾದ ಅನಂತಮುಕ್ತರೂ, ಸಮಾನ ಮತ್ತು ನೀಚರಾದ ಅನಂತ ಮುಕ್ತರೂ ದೂರದೇಶದ ಅಮುಕ್ತರೂ ಸುಖಿಸುತ್ತಿದ್ದರೂ ನನಗೇನೂ ದುಃಖವಾಗುವುದಿಲ್ಲ. ಜೊತೆಗಾರನೊಬ್ಬನಿಗೆ ಮೊದಲು ತೀರ್ಥವನ್ನು ಮಠದ ಸ್ವಾಮಿಗಳು ಕೊಟ್ಟರೆ ನನ್ನ ಹೊಟ್ಟೆಯಲ್ಲಿ ಬೆಂಕಿ ಹಾಕಿದಂತಾಗುತ್ತದೆ. ಇಂತಹ ಮಾತ್ಸರ್ಯದಿಂದ ಕೋರ್ಟುವ್ಯಾಜ್ಯಗಳೂ ನಡೆದಿವೆ. ಮಹದನರ್ಥಗಳಿಗೆ ಕಾರಣವಾದ ಈ ಮಾತ್ಸರ್ಯವು ಸರ್ವಥಾ ತ್ಯಾಜ್ಯವು. ಮತ್ಸರ ಗ್ರಸ್ತರಿಗೆ ಭಾಗವತಪುರಾಣ ಶ್ರವಣಕ್ಕೂ ಅಧಿಕಾರವಿಲ್ಲವೆಂದು ಹೇಳಿರುವುದರಿಂದ, ಈ ದೋಷವನ್ನು ತ್ಯಜಿಸಬೇಕು. ಇದು ಪ್ಲೇಗಿನಂತೆ ಒಬ್ಬರಿಂದೊಬ್ಬರಿಗೆ ಹರಡುವ ಕ್ರೂರವ್ಯಾಧಿ. ನಿರ್ಮತ್ಸರರ ಗೋಷ್ಠಿಯಲ್ಲಿದ್ದರೆ, ಗಾಳಿಬೀಸುವುದರಿಂದ ಬೀದಿ ನೀರು ಮಾಯವಾಗುವಂತೆ, ಹೃದಯದ ಮಾತ್ಸರ್ಯವು ನಶಿಸಿಹೋಗುತ್ತದೆ.

ಪ್ರಬಲವಾದ ಪೂರ್ವೋಕ್ತ ಮೂರುದೋಷಗಳು ಹೋದರೆ ವೈಷ್ಣವ ಪಂಡಿತರು, ಬೇಗ ಮನನಧ್ಯಾನಶೀಲರಾಗಿ ಹೃದಯದಲ್ಲಿ ಹರಿಯನ್ನು ಕಾಣಬಹುದಲ್ಲವೇ!

-3-

ಇದರ ಮೇಲೆ ಇನ್ನೊಂದು ಮಾತು. (1) ಇತರ ವಿದ್ಯೆಗಳನ್ನು ಕಲಿಯದವನು ಮೂಢನೆನಿಸಬಹುದು, ದರಿದ್ರನಾಗಬಹುದು, ಆದರೆ ಅವನಿಗೆ ನರಕಾದಿಗಳಾಗುವುದಿಲ್ಲ. ಕೆಟ್ಟ ಪುನರ್ಜನ್ಮವಾಗುವುದಿಲ್ಲ. ಧರ್ಮಜ್ಞಾನವಿಲ್ಲದಿದ್ದರೆ ದುರಾಚಾರದಿಂದ ಪಾಪಿಯಾಗಿ ನರಕಕ್ಕೇ ಬೀಳುವನು.

---

(ಹಿಂದಿನ ಪುಟದಿಂದ)ಕೊಡುವುದಿಲ್ಲ. ಕೆಲವರು 7.75 ರೂ. ಕೊಡುತ್ತಾರೆ. ಏಕೆಂದರೆ ಧರ್ಮಪ್ರವೃತ್ತಿಗೆ ಸಾಮಾನ್ಯ ಜ್ಞಾನವೊಂದೇ ಕಾರಣವಲ್ಲ. 8ರೂ. ಕೊಡಬೇಕಾದಅಷ್ಟನ್ನೂ ಕೊಟ್ಟರೆ ರಾಜನು 50ರೂ. ಇನಾಮು ಕೊಡುತ್ತಾನೆ. ಕಡಿಮೆ ಕೊಟ್ಟರೆ ದಂಡಮಾಡುತ್ತಾನೆಂದು ಫಲಪರ್ಯಂತವಾದ ಸಾಕಲ್ಯಜ್ಞಾನಬೇಕು. ಹೀಗೆ, ಧರ್ಮಮಾಡದಿದ್ದರೆ ನರಕವಾಗುತ್ತೆ. ಮಾಡಿದರೆ ಇಂಥ ಸ್ವರ್ಗಸುಖವಾಗುತ್ತೆ ಎಂಬ ವಿಶೇಷಜ್ಞಾನವೂ ಬೇಕು. ಈ ಸಮಗ್ರ ವಿಶೇಷಜ್ಞಾನವಾದರೂ ಪ್ರಾಮಾಣಿಕವಾದುದೆಂದು ಸಾಕ್ಷಿಗೃಹೀತವಾಗಿರಬೇಕು. ಏವಂಚ ಗೃಹೀತಪ್ರಾಮಾಣ್ಯಕಶಂಕಾಅಕಳಂಕಿತನಿಶ್ಚಯರೂಪ- ಸಾಕಲ್ಯಜ್ಞಾನ ಬೇಕು. ಅಥವಾ ಎಂಟೆಂದು ತಿಳಿದಮೇಲೆ ಎಂಟನ್ನೇ ಕೊಡಬೇಕೆಂಬ ಧ್ಯೇಯಾನುಸಾರಿವಿಮರ್ಶಿತನಿಶ್ಚಯವುಳ್ಳವನಾಗಿರಬೇಕು. ಎಂದರೆ ಗುಣಪ್ರೇಮಿಯಾಗಿರಬೇಕು. ಅದು ಸ್ವಾಭಾವಿಕ ಅಥವಾ ಸಂಸ್ಕೃತಮನಸ್ಸಿನ ಸಾಧುತ್ವ. ಇಂಥ ಹಠವಿದ್ದರೂ ಧರ್ಮಕಾರ್ಯ ನಡೆಯುತ್ತೆ. ಪೂರ್ವೋಕ್ತಧರ್ಮಜ್ಞಾನವು ಅಥವಾ ದೃಢನಿಶ್ಚಯವು ಸರ್ವದಾ ಮನಸ್ಸಿನಲ್ಲಿ ಜಾಗರೂಕವಾಗಿರಬೇಕು ಮತ್ತು ಕರಣಪಾಟವ ಸಹ ಇರಬೇಕು. ಎಂದರೆ ವಿಸ್ಮೃತಿ, ನಿರ್ಬಂಧ, ರೋಗ, ವಿಘ್ನ, ವಿರೋಧಿಯ ಆಕರ್ಷಗಳು ಇರಕೂಡದು. ದೇಶಕಾಲಸಂಗಕರಣೋಪಕರಣಾದಿ ಅನುಕೂಲಗಳೂ ಸಂತತ ಧರ್ಮಪ್ರವೃತ್ತಿಗೆ ಕಾರಣವು. ಧರ್ಮಾನುಷ್ಠಾನಕ್ಕೆ 'KNOWLEDGE, WILL AND HABIT' ಎಂಬ ಮೂರೂ ಕಾರಣಗಳೆಂದು ಆಂಗ್ಲರು ಹೇಳಿದ್ದಾರೆ.

## ವೈಷ್ಣವರ ಮುಖ್ಯ ಕರ್ತವ್ಯ

ಮೀಮಾಂಸಾಶಾಸ್ತ್ರೋಕ್ತಬ್ರಹ್ಮಸ್ವರೂಪವನ್ನು ತಿಳಿಯದವನು ವ್ಯಾಘ್ರಾದಿದುರ್ಯೋನಿಗಳಲ್ಲಿ ಹುಟ್ಟುವನು. ಉಪಕಾರಿಗಳಾದ ಹರಿವಾಯುಗಳನ್ನು ತಿಳಿಯಲಾರದೇ, ಅವರಲ್ಲಿ ಉಪೇಕ್ಷೆಯಿಂದ ಕೃತಘ್ನನಾಗಿ ಕ್ರಮವಾಗಿ ತಮಸ್ಸನ್ನೇ ಹೊಂದುವನು. ತಿಳಿದು ಅನುಸರಿಸಿದರೆ ಇಹದಲ್ಲಿ ಸುಖವಾಗಿದ್ದು-ದೇವರ ಭಕ್ತರಿಗೆ ಅಂತರಂಗ ದುಃಖವು ಅತ್ಯಲ್ಪ-ಕ್ರಮವಾಗಿ ಮೋಕ್ಷವನ್ನೇ ಹೊಂದುವನು. (2) ದ್ವೈತ ಮತದ ತತ್ತ್ವಗಳನ್ನು ತಿಳಿದು ಅನುಷ್ಠಾನ ಮಾಡಿದರೆ ಕೇಡಾಗುವುದೆಂದು ಇತರ ಯಾವ ಮತದವರೂ ಹೇಳುವುದಿಲ್ಲ. ದ್ವೈತಮತದಲ್ಲಿಯಾದರೋ ಇದಕ್ಕೆ ಭಿನ್ನವಾದ ಯಾವ ಮತದ ಅನುಸರಣೆಯೂ ತಮಸ್ಸನ್ನು ತಪ್ಪಿಸುವುದಿಲ್ಲವೆಂದು ಸ್ಪಷ್ಟ ಉಪಪಾದನೆಯಿದೆ. (3) ಕಿಂಚ ಆಚರಣೆಗೆ ಶ್ರೀಮಧ್ವಮತಕ್ಕಿಂತ ಹೆಚ್ಚು ಸುಖಕರವಾದ ಮತವಿಲ್ಲ. 'ಓಂ ಅಥಾತೋ ಬ್ರಹ್ಮಜಿಜ್ಞಾಸಾ ಓಂ' ಎಂಬ ಪ್ರಥಮಸೂತ್ರದ ಅರ್ಥವನ್ನು ಹೇಳುವಾಗಲೇ ಭಗವತ್ಪಾದರು ಕುರುಡನಂತೆ ಗುರುಗಳನ್ನು ಅನುಸರಿಸಕೂಡದೆಂದು ಹೇಳಿರುವರು. ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಂಡು ಒಳ್ಳೆಯಮನಸ್ಸಿನಿಂದ ಬೇಕಾದ ಪೂರ್ವಪಕ್ಷಗಳನ್ನು ಗುರುಗಳಲ್ಲಿ ಮಾಡಿ ನಿಜತತ್ತ್ವನಿರ್ಣಯವು ನಿಸ್ಸಂಶಯವಾಗಿ ಆಗುವವರೆಗೂ ಜಿಜ್ಞಾಸೆ ಮಾಡಬೇಕು, ವಿಚಾರ ಮಾಡಬೇಕು, ಶ್ರವಣ ಮನನಗಳನ್ನು ಮಾಡುತ್ತಿರ-ಲೇಬೇಕು, ತತ್ತ್ವನಿಶ್ಚಯವು ಚೆನ್ನಾಗಿ ಆದಮೇಲೆಯೇ ಧ್ಯಾನಾದಿ ಮಹಾಪ್ರಯತ್ನಗಳನ್ನು ಕೈಗೊಳ್ಳಬೇಕೆಂದು ಹೇಳಿರುವರು. ಮೂಢಭಕ್ತಿಯನ್ನಾಗಲೀ, ಅವಿಚಾರಿತ ನಂಬಿಕೆಗಳನ್ನಾಗಲೀ ಪ್ರಶಂಸಿಸಿಲ್ಲ. ಇಷ್ಟು ಅವಕಾಶವನ್ನು ಇತರ ಮತಸ್ಥರು ಕೊಟ್ಟಿಲ್ಲ. (4)ದ್ವೈತಮತದ ದೇವರು, ಪ್ರತ್ಯಕ್ಷ ಕಾಣುವವನು, ಸುಂದರನು, ಅಸ್ವಾರ್ಥಪರೈಕಾರ್ಥಪ್ರವೃತ್ತಿಯುಳ್ಳವನು, ಜ್ಞಾನ, ಬಲ, ಜೀವನಸೌಖ್ಯಾದಿಸರ್ವಾಭೀಷ್ಟದಾಯಕನು, ನಿರ್ದೋಷನು, ಕೃಪಾಪೂರ್ಣನು ಇಂತಹವನನ್ನು ಭಜಿಸುವುದಕ್ಕೆ ಏನು ಕಷ್ಟ? ಏನು ತ್ಯಾಗ ಮಾಡಬೇಕು? ಅವನಿಗೋಸ್ಕರ ಯಾವ ಉತ್ತಮದ್ರವ್ಯ ಬಿಡಬೇಕು? ಘೋರ, ಕ್ರೂರ, ಸ್ವಾರ್ಥ, ಕುರೂಪಿ, ಲೋಭಿಯಾದವನನ್ನು ಭಜಿಸಲು ತುಂಬಾ ಕಷ್ಟಪಟ್ಟು ಮನಸ್ಸು ಮಾಡಬೇಕು. ಈ ಯಾವ ದೋಷವೂ ಈ ಮತದ ದೇವರಲ್ಲಿಲ್ಲ. (5) ಅದೆಲ್ಲವೂ ಅಂತಿರಲಿ. ಚೇತನರೆನಿಸಿದ ನಮ್ಮಿಂದ ತಿಳಿಯಲ್ಪಡುವ ವಸ್ತುಗಳಲ್ಲಿ ಅತಿಹಿರಿಯದೆಂದೂ, ಆಶ್ಚರ್ಯ, ಧನ್ಯ, ಅತ್ಯದ್ಭುತವಸ್ತುವೆಂದೂ ಹೇಳಲ್ಪಟ್ಟಿರುವ ಬಹುಸಾಧು ಚೇತನ(ಪರತತ್ತ್ವ) ಒಂದಿರುವುದೆಂದೂ, ಅವನು ಬ್ರಹ್ಮಮೀಮಾಂಸಾಶಾಸ್ತ್ರವೆಂಬ ಸುಂದರಮಂದಿರದಲ್ಲಿ ಗುರುಸಹಾಯ ದಿಂದ ಹೊಕ್ಕರೆ ಸಿಗುವ(ಜ್ಞೇಯ)ನೆಂದು ತಿಳಿದೂ ಕೂಡ ಆ ಮಹದ್ವಸ್ತುವನ್ನು ನೋಡಲು ಆ ಮಂದಿರದ ಕಡೆಗೇ ತಿರುಗದಿದ್ದರೆ, ನಮ್ಮ ಚೇತನಭಾವದ ನಾಶವನ್ನು ನಾವು ಬಯಸಿದಂತೆಯೇ ಸರಿ. ಸೂಜಿಗಲ್ಲಿನ ಕಡೆಗೆ ಆಕರ್ಷಿತವಾಗದಮೇಲೆ ಅದು ಉಕ್ಕಿನತಂತಿಯೇ? ಬೆಂಕಿಯ ಸಮೀಪದಲ್ಲಿ ಕರಗದ ಮೇಲೆ ಅದು ಬೆಣ್ಣೆಯೇ? ಚೇತನನೆಂದರೆ ಜ್ಞಾನಾತ್ಮಕವಾದ ಸುಖದುಃಖಾನುಭವ ಮಾಡುವ ಇಚ್ಛಾಪೂರ್ಣ ದ್ರವ್ಯವಲ್ಲವೇ? ಮುಕುಂದನನ್ನು ತಿಳಿಯುವ ಇಚ್ಛೆ ಬಾರದಮೇಲೆ ನಮ್ಮ ಚೇತನತ್ವವೇ ನಮಗಿಲ್ಲವೆಂದು ಪ್ರಾಪ್ತವಾಗುವುದಿಲ್ಲವೇ? ಆದ್ದರಿಂದ ಉತ್ತಮಧರ್ಮವನ್ನು ಹೊಂದಿದ್ದಕ್ಕೆ ಸಾರ್ಥಕ್ಯಬಯಸಿ, ಉತ್ತಮೋತ್ತಮ ಜ್ಞಾನಿಕುಲದಲ್ಲಿ ಹುಟ್ಟಿದ ಮಾಧ್ವನು ಏನನ್ನಾದರೂ ತಿಳಿಯಬೇಕೆಂದರೆ, ನೋಡಬೇಕೆಂದರೆ, ಶ್ರೀರಂಗನನ್ನು , ಶ್ರೀಮಧ್ವಶಾಸ್ತ್ರಭವನದಲ್ಲಿ ತಿಳಿಯಬೇಕು, ಹೃನ್ಮಂಟಪದಲ್ಲಿ ನೋಡಬೇಕು. ಇತರ ಬಯಕೆಗಳು ಅಚೇತನತುಲ್ಯರಾದ ಇತರರಿಗೇ ಉಚಿತ. ಶ್ರೀಹನುಮಂತದೇವರ ವಚನವಿದು -

'' ಯಸ್ತೇ ಕಥಾಸೇವಕ ಏವ ಸರ್ವದಾ ಸದಾರತಿಸ್ತ್ವಯ್ಯಚಲೈಕಭಕ್ತಿಃ ।
ಸ ಜೀವಮಾನೋ ನ ಪರಃ ಕಥಂಚಿತ್ತಜ್ಜೀವನಂ ಮೇಽಸ್ತ್ವಧಿಕಂ ಸಮಸ್ತಾತ್ ॥''

ಎಲೈ ರಾಮನೇ ನಿನ್ನ ಕಥೆಯನ್ನು ಸರ್ವದಾ ಕೇಳುವ, ನಿನ್ನಲ್ಲಿ ಸದಾ ಅನುರಾಗಯುಕ್ತನಾಗಿ ನಿನ್ನಲ್ಲೇ ಅಚಲ ಭಕ್ತಿಯನ್ನು ಮಾಡುವ ಸ್ಥಿತಿಯೇ ಜೀವನವು. (ಕೇವಲ ಶ್ವಾಸಾದಿಯುಕ್ತತೆಯಲ್ಲ) ಅಂಥ ಜೀವನವನ್ನು ಎಲ್ಲರಿಗಿಂತ ಹೆಚ್ಚಾಗಿ ನನಗೆ ಕೊಡು.

ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು .

ಶ್ರೀಹೆಚ್. ಸುಬ್ಬರಾಯರಿಗೆ ನಮನಗಳು.ಶ್ರೀಮದಾಚಾರ್ಯರಿಗೆ ನಮನಗಳು. ಶ್ರೀಮಧ್ವೇಶನಿಗೆ ನಮಸ್ಕಾರಗಳು.

(ಶ್ರೀಶೀರೂರು ಮಠಾಧೀಶರಾಗಿದ್ದ ಶ್ರೀಮಲ್ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು ನಮ್ಮಂತಹ ಅಜ್ಞಜನರಿಗಾಗಿ ಶ್ರೀಮದಾಚಾರ್ಯರ ಚರಿತ್ರೆಯನ್ನೊಳಗೊಂಡಿರುವ ಅವರ ಸಿದ್ಧಾಂತೋಪದೇಶವನ್ನು ರಚಿಸಿ ನಮಗಾಗಿ ಪ್ರಕಟಿಸಿದ್ದರು. ಅದನ್ನು ಗಣಕೀಕರಿಸುವ ಕಾರ್ಯಮುಗಿದಮೇಲೆ ತಮಗಾಗಿ ಅದನ್ನು ಕೊಡುತ್ತೇನೆ. )

ಶ್ರೀವೃಷನಾಮಸಂವತ್ಸರದ ಭಾದ್ರಪದ ಶುಕ್ಲ ಪಂಚಮೀ ಗುರುವಾರ , 23-8-2001)